NON-OFFICIAL RESOLUTION

Re: Disapproving the Mysore State Civil Services Class III Posts Recruitment (Validation) Ordinance, 1965

(Debate continued).

MYSORE STATE CIVIL SERVICES CLASS III POSTS RECRUITMENT (VALIDATION) BILL, 1965.

Motion to consider—(contd).

Mr. SPEAKER.—Sri Gopala Gowda may commence his speech.

Sri G. V GOWDA (Palya).—Sir, before that I want some clarification on this very measure. This measure seeks to repeal the Ordinance. It is learnt that the ordinance has been challenged. That being so, can we consider this at this stage?

Mr. SPEAKER.—That is a point which has been decided more than once. Are we considering the validity of the Ordinance or are we considering the contents of the ordinance issued?

Sri Gopala Gowda may begin.

Sri K. S. SURYANARAYANA RAO (Mysore City).—Subject to your decision, I would like to say that what we have heard is that the subject matter of the ordinance that we are going to validate by this Bill is being agitated in the High Court and for that the High Court has issued a stay order also. Therefore, we seek your guidance as to how we can proceed in this matter.

Mr. SPEAKER.—The Hon'ble Members have put a question that the High Court has admitted a writ petition saying that the issue of the ordinance is not proper and an interim stay has been granted. The interim stay operates so far as the enforcement of the ordinance by Government is concerned. I do not think the High Court has ever intended that the Legislature should not debate. If the Hon'ble Members are interpreting like that, they are imputing to the High Court Judges something which is farthest from their minds. I am concerned with the Debate here.

Sri C. J. MUCKANNAPPA.—You must put us on the correct tract because if something goes wrong let us not be blamed tomorrow. Suppose we say something against the High Court I think it is not proper.

Mr. SPEAKER.—If the Hon'ble Member say something against the High Court, first I will pull him up and next the High Court will punish if he is transgressing the limits.

Sri C. J. MUCKANNAPPA.—That is why we want a guidance from the Chair as to how we should proceed, whether we can interfere when there is a stay order issued by the High Court. The question is whether at this stage we are entitled to discuss this matter. We do not want to bring in other things.

Mr. SPEAKER.—So far as the High Court is concerned, it is exercising its jurisdiction. I am not here to advise and say whether the

jurisdiction has been properly exercised or improperly exercised. So far as the debate is concerned, members are entitled to debate to the extent that the discharge of their duties requires them to debate. What is it that they are debating? They are not debating as to whether the Governor has got the power to issue the ordinance or not. The ordinance has been issued. When the Ordinance comes up before the House for validation, then it is for the House to accept or reject it and that has nothing to do with whether there is any writ petition or not, and if there is a writ petition whether it has any merit and if it has any merit whether they are entitled to debate it or not. So far as the members are concerned, they have nothing to do with the writ.

(*Sri S. Gopala Gowda rose.*)

SRI S. SIVAPPA.—This Bill seeks to validate the ordinance, the subject matter of which is also validation of the recruitment to Class III posts to the Mysore State Civil Services.

MR. SPEAKER.—The Hon'ble Member Sri Gopala Gowda is yielding always. Later on, he must not feel in the remotest corner of his heart that he is hustled. I am giving him time, but he is sacrificing it by yielding to other members and afterwards if he says that he is hustled; he will have to take the blame on his own head.

SRI S. SIVAPPA.—The question is whether, when the matter is before the High Court, it is sub-judice or not.

MR. SPEAKER.—We are now discussing whether the House agrees or does not agree. The opinion of the House is not before the High Court and the High Court cannot say that the House cannot pass this Bill. We have got a Bill, the contents of which may be the same as contained in the ordinance which has been challenged before the High Court on a writ petition. That may be a fact, but this Bill has nothing to do with the writ petition. It is up to us to discuss the Bill and pass or reject it and it is up to the High Court to decide the writ as they ike. But the High Court cannot say that we cannot discuss this Bill. No such order has been communicated to me nor will it ever be done. They will decide the matter placed before them. All that they have now done is to ask the Government to hold its hand and beyond that there is nothing.

9-30 A.M.

What right have you to criticise the High Court? If you criticise I will pull you up. Secondly, you have immunity with regard to what you say here. You must not abuse the immunity given to you. If you abuse, it is not worthy of us, the Members of the Legislature; it does not become the high status of the Legislature.

SRI K. H. RANGANATH (Mudigere).—Sir, I am given to understand that it is not the right of the Governor to issue an ordinance that is being questioned but the contents of the ordinance that are being

(SRI K. H. RANGANATH)

questioned in the High Court. The Bill which seeks to replace the ordinance has copied all the sections of the ordinance. Therefore, I would like to know from the Government whether it is the right of the Governor to issue an ordinance that is questioned by the High Court or whether the contents of the ordinance are questioned by the High Court. If the contents of the ordinance are before the High Court for their consideration, then the convention we have been following is to treat it as *sub-judice* and not to discuss it here.

SRI D. DEVARAJ URS.—Sir, as you rightly pointed out, we are not questioning or discussing the merits or demerits of the issue of an ordinance issued by the Governor. Here before us is a Bill which seeks to validate the constitution of the State-level and Division-Level Recruitment Committees and the validation of the procedure of these committees in filling up the vacancies. This is a Bill which does not seek to validate the ordinance; it merely replaces the ordinance and validates the action and the constitution of the committees.

SRI K. H. RANGANATH.—Sir, I am not satisfied with the answer of the Hon'ble Minister. The Government is empowered to bring in a Bill which either completely copies the ordinance or with some modifications. The Bill before us simply copies the ordinance. So, I want to know whether the writ petition before the High Court is in respect of the power of the Governor to issue an ordinance or in respect of the contents of the ordinance.

MR. SPEAKER.—If the Hon'ble Member has not understood what has been explained by the Hon'ble Minister, the Speaker is helpless. So far as the debate on the floor of the House is concerned, I do not have a copy of the writ petition before me. Whatever may be the contents of it, there is no jurisdiction for the High Court to say that the debate must not take place on the floor of the House. I also cannot impute to them the motive that thay ever intended that there should be a dimunition of the scope of the debate here. The scope of the debate here is absolutely protected. All that I wanted to say was that there should be no perverse remarks about any order by the High Court. Even if the High Court comes to any conclusion about the matter that is before it, it is at liberty to do so. After the Bill is passed, still the High Court, if it has got valid reasons, can say that in spite of all this they come to this conclusion. What is all this confusion about ?

SRI C. J. MUCKANNAPPA.—Sir, you must shed some light and show us the way. On many a small matter you have been kind enough to put us on the proper tract so that the deliberations can go on well. Let not other people laugh at us.

MR. SPEAKER.—On the other hand, there is a feeling that I am hustling them through.

SRI S. SIVAPPA.—This is the first thing of its kind that has come before us. Why not we call the Advocate General and hear him ?

Mr. SPEAKER.—Till then, should we wait with folded hands ? Let the debate continue. You have thrown out a suggestion.

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮಿ, ಅಧ್ಯಕ್ಷರೇ, ಮೈಸೂರು ರಾಜ್ಯದ ಸಿವಿಲ್ ಸೇವೆಗಳ (ತೃತೀಯ) ಮೂರನೇ ವರ್ಗದ ಹುದ್ದೆಗಳಿಗೆ ನೇಮಕ ಮಾಡಿರುವುದನ್ನು (ಮಾನ್ಯಗೊಳಿಸುವುದಕ್ಕೆ ಸಂಬಂಧಪಟ್ಟ) ಅಧ್ಯಾದೇಶ, 1965, ಇದನ್ನು ಈ ಮಾನ್ಯ ಸಭೆಯು ಅನುಮೋದಿಸುವುದಿಲ್ಲ ಅನ್ನುವ ಒಂದು ನಿರ್ಣಯವನ್ನು ನಾನು ತಮ್ಮ ಅನುಮತಿ ಪಡೆದು ಅದನ್ನು ಈಗ ಸಭೆಯು ಮುಂದೆ ಮಂಡಿಸುತ್ತಿದ್ದೇನೆ.

ಸ್ವಾಮಿ, ಈಗತಾನೆ ಮಾನ್ಯ ಮಂತ್ರಿಗಳು ಮಸೂದೆಯನ್ನು ಮಂಡಿಸುವ ಕಾಲದಲ್ಲಿ, ಅವರು, ಮಂಡಿಸತಕ್ಕ ಮಸೂದೆಗೂ ಮತ್ತು ಈ ನಿರ್ಣಯಕ್ಕೂ ಯಾವ ಸಂಬಂಧವೂ ಇಲ್ಲ ಎಂದು ಹೇಳಿದರು. ಆ ತಪ್ಪನ್ನವರು ಬೇಗ ತಿದ್ದಿಕೊಳ್ಳುತ್ತಾರೆಂದು ನಾನು ಆಶಿಸುತ್ತೇನೆ.

ಸ್ವಾಮಿ, ಕಳೆದ ಅಧಿವೇಶನ ಮುಗಿದ ಬಳಿಕ ಮತ್ತೆ ನಾವು ಈಗ ಅಧಿವೇಶನಕ್ಕೆ ಸೇರಿರತಕ್ಕ ಅವಧಿಯ ನಡುವೆ ಸರ್ಕಾರದವರು ಎರಡು ಮುಖ್ಯ ವಿಷಯಗಳ ಬಗ್ಗೆ ಅಧ್ಯಾದೇಶಗಳನ್ನಿತ್ತಿದ್ದಾರೆ. ನೆನ್ನೆಯ ದಿವಸ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮುಂದಕ್ಕೆ ಹಾಕಿ, ಇನ್ನು ಅವುಗಳ ಬಗ್ಗೆ ನಡೆಯತಕ್ಕ ಆಡಳಿತ ಯಾವ ರೀತಿ ಮುಂದುವರಿದುಕೊಂಡು ಹೋಗಬೇಕೆಂಬ ಬಗ್ಗೆ ರಾಜ್ಯಪಾಲರು ಹೊರಡಿಸಿದ್ದ ಅಧ್ಯಾದೇಶವನ್ನು ಅಂಗೀಕರಿಸಲು ಇಂಥ ಒಂದು ಮಸೂದೆಯನ್ನು ಈ ಸಭೆಯು ಅಂಗೀಕರಿಸಿತು. ಈ ದಿವಸವೂ ಸರ್ಕಾರದವರು ಅಂಥದೇ ಒಂದು ಪ್ರಯತ್ನವನ್ನು ಮಾಡುತ್ತಿದ್ದಾರೆ. ಆದರೆ ಈ ದಿವಸ ಈ ಒಂದು ನಿರ್ಣಯವನ್ನೂ ಮತ್ತು ಸರ್ಕಾರದವರಿಟ್ಟಿರತಕ್ಕ ಮಸೂದೆ ಈ ಎರಡನ್ನೂ ಒಟ್ಟಿಗೆ ಚರ್ಚೆ ಮಾಡಬೇಕಾದ ಪ್ರಮೇಯ ಬಂದಿದೆ. ಆದರೆ ಮೊದಲು ಸಂಪೂರ್ಣವಾಗಿ ಈ ನಿರ್ಣಯವನ್ನು ಚರ್ಚೆಮಾಡಿ ಸಭೆಯು ಇದನ್ನು ಅಂಗೀಕರಿಸುತ್ತದೋ, ಇಲ್ಲವೋ ಅದು ಬೇರೆ ಮಾತು. ಅಂತೂ ಇದರ ವಿಚಾರದಲ್ಲಿ ಸಭೆಯು ಒಂದು ನಿರ್ಣಯವನ್ನು ತೆಗೆದುಕೊಂಡ ನಂತರ ಆ ಮಸೂದೆಯಮೇಲೆ ಚರ್ಚೆ ಮಾಡತಕ್ಕದ್ದು ಸರಿಯಾದ ಕ್ರಮವೆಂದೂ ಮತ್ತು ಮಾರ್ಗವೆಂದೂ ನಾನು ಅರಿಕೆಮಾಡಿಕೊಳ್ಳುತ್ತೇನೆ. ಈ ಆರ್ಡಿನೆನ್ಸಿನ ಅವಶ್ಯಕತೆ ಹಾಗೂ ಅದನ್ನು ಸರ್ಕಾರ ಯಾವ ಉದ್ದೇಶದಿಂದ ಹೊರಡಿಸಬೇಕಾಗಿ ಬಂತು ಅನ್ನುವುದರ ಬಗ್ಗೆ ಅವರು ಕೆಲವು ವಿವರಣೆಗಳನ್ನು ಕೊಟ್ಟಿದ್ದಾರೆ.

ಮೈಸೂರು ರಾಜ್ಯದಲ್ಲಿ 1961ರಿಂದಲೂ ಕೆಲವು ತೃತೀಯ ದರ್ಜೆಯ ನೌಕರರನ್ನು ನಮ್ಮ ಸರ್ಕಾರದವರು ಮೈಸೂರ್ ಸ್ಟೇಟ್ ಸಿವಿಲ್ ದರ್ಜೆಯ ನೌಕರಿಗೆ ಕಾನೂನಿನ ಅಧೀನದಲ್ಲಿ ನೇಮಕ ಮಾಡಿಕೊಳ್ಳುವುದಕ್ಕೆ ರಾಜ್ಯಮಟ್ಟದಲ್ಲಿಯೂ ಮತ್ತು ಡಿವಿಜನ್‌ಗಳ ಮಟ್ಟದಲ್ಲಿಯೂ ರೆಕ್ರೂಟ್‌ಮೆಂಟ್ ಸಮಿತಿಗಳನ್ನು ನೇಮಕ ಮಾಡಿದ್ದರು. 1961ರಿಂದ ಈ ಸಮಿತಿಗಳು ಅನೇಕ ಸಹಸ್ರಾರು ನೌಕರರನ್ನು ಕೆಲಸಕ್ಕೆ ನೇಮಕ ಮಾಡಿಕೊಂಡಿದೆ. ಆ ನೌಕರರೆಲ್ಲರೂ ಇಲ್ಲಿಗೆ 4—5 ವರ್ಷಗಳಿಂದಲೂ ಸರ್ಕಾರಿ ಸೇವೆಯನ್ನು ಸಲ್ಲಿಸಿಕೊಂಡು ಬರುತ್ತಿದ್ದಾರೆ. ಈ ರಿಕ್ರೂಟ್ ಸಮಿತಿಗಳನ್ನೆಲ್ಲಾ ನೇಮಕ ಮಾಡಿದ್ದು 1961ನೇ ಅಕ್ಟೋಬರ್ 23ರಲ್ಲಿ. ಅಲ್ಲಿಂದಲೂ ಅಂದರೆ ತಾರೀಖು 23ನೇ ಅಕ್ಟೋಬರ್ 1961 ರಿಂದಲೂ ಮೈಸೂರು ಸ್ಟೇಟ್ ಸಿವಿಲ್ ಸರ್ವೀಸ್ ಕ್ಲಾಸ್ III ಪೋಸ್ಟ್ಸ್ ರೆಕ್ರೂಟ್‌ಮೆಂಟ್ ಕಮಿಟೀಸ್ (ಕಾನ್‌ಸ್ಟಿಟ್ಯೂಷನ್ ಮತ್ತು ಫಂಕ್‌ಷನ್) ರೂಲ್ಸನ್ನು ರಚಿಸಿ ಅವು ಈಗಾಗಲೇ ಜಾರಿಗೆ ಬಂದಿರುತ್ತವೆಂದು ಸರ್ಕಾರದವರು ಹೇಳಿದ್ದಾರೆ.

ಈ ಮಧ್ಯೆ ಹೈಕೋರ್ಟಿನವರು ಇಂತಹ ಒಂದು ಕಮಿಟಿಯನ್ನು ರಚನೆ ಮಾಡಿರತಕ್ಕದ್ದು ನ್ಯೂನತೆಗಳಿಂದ ಕೂಡಿದೆ, ಮತ್ತು ಈ ಸಮಿತಿಯವರು ಏನು ನೌಕರರನ್ನು ಆಯ್ಕೆ ಮಾಡಿದ್ದಾರೆ, ಆ ಆಯ್ಕೆ ಕ್ರಮಬದ್ಧವಾಗಿಲ್ಲ ಮತ್ತು ಅಧಿನಿಯಮಗಳಿಗೆ ಅನುಸಾರವಾಗಿಲ್ಲ, ಹಾಗೂ ರಾಜ್ಯಪಾಲರು ಏನು ಅಧಿನಿಯಮಗಳನ್ನು ಮಾಡತಕ್ಕಂತಹ ಮತ್ತು ಸಮಿತಿಗಳನ್ನು ರಚನೆ ಮಾಡತಕ್ಕಂತಹ ಕಾನೂನನ್ನು ರಿಟ್ರೋಸ್ಪೆಕ್ಟಿವ್ ಆಗಿ ಮಾಡಿದ್ದಾರೆ. ಹಿಂದೆ ಮಾಡಿದಂತಹ ನೇಮಕಾತಿಗಳಿಗೆ ಅನ್ವಯಿಸುತ್ತದೆ ಎಂದು ಮಾಡಿದ್ದಾರೆ, ಅದೂ ಕೂಡಾ ಕ್ರಮಬದ್ಧವಾಗಿಲ್ಲ ಎನ್ನುವ ಮಾತನ್ನು ಅವರು ಹೇಳಿದ್ದಾರೆ. 1961—62, 63, 64 ಮತ್ತು 65, ಈ ವರ್ಷಗಳಲ್ಲಿ ಸ್ಟೇಟ್ ಲೆವೆಲ್ ರಿಕ್ರೂಟ್‌ಮೆಂಟ್ ಕಮಿಟಿ, ಡಿವಿಜನಲ್ ಲೆವೆಲ್ ರಿಕ್ರೂಟ್‌ಮೆಂಟ್ ಕಮಿಟಿಗಳು ಸಹಸ್ರಾರು ತೃತೀಯ ದರ್ಜೆಯ ನೌಕರರನ್ನು, ಅನೇಕ ಇಲಾಖೆಗಳಲ್ಲಿ ನೇಮಕ ಮಾಡಿಕೊಂಡಿವೆ. ಈ ಅವಧಿಯಲ್ಲಿ ಮಾಡಿದಂತಹ ಏನು ನೇಮಕಾತಿಗಳಿವೆ, ಅದರ ಮೇಲೂ ಕೂಡಾ ಇವತ್ತು ಅನೇಕ ವಿವಾದಗಳು ಬಂದಿವೆ. ಸ್ವಾಮಿ, ಈ ಸರಕಾರಿ ನೌಕರಿಗೆ ಜನರನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ನೇಮಿಸಿಕೊಳ್ಳುವುದಕ್ಕೆ ಒಂದು ಪಬ್ಲಿಕ್ ಸರ್ವಿಸ್ ಕಮಿಷನ್ ಎಂದು ನಮ್ಮ ರಾಜ್ಯದಲ್ಲಿ ರಾಜ್ಯಾಂಗದತ್ತ

(ಶ್ರೀ ಎಸ್. ಗೋಪಾಲ ಗೌಡ)

ವಾಗಿ, ರಾಜ್ಯಾಂಗ ವಿಧಿಗಳಿಗೆ ಅನುಸಾರವಾಗಿ ನೇಮಕವಾಗಿದೆ. ಅವರನ್ನು ಇದೇ ಕೆಲಸಕ್ಕಾಗಿ ನೇಮಕ ಮಾಡಲಾಗಿದೆ; ಯಾವ ಕಾರಣಕ್ಕೋ ಗೊತ್ತಿಲ್ಲ, ಈ ಆಯ್ಕೆಯಿಂದ ಪಬ್ಲಿಕ್ ಸರ್ವಿಸ್ ಕಮಿಷನ್ ಅವರು ಕೆಲವು ನೌಕರರನ್ನು ನೇಮಕ ಮಾಡತಕ್ಕದ್ದನ್ನು ಅವರ ಅಧಿಕಾರದಿಂದ ಹೊರತು ಪಡಿಸಿ ಕಮಿಟಿಗಳನ್ನು ಸರ್ಕಾರದವರು ರಚನೆ ಮಾಡಿ ಅವರಿಗೆ ಈ ಕೆಲಸವನ್ನು ವಹಿಸಿದ್ದಾರೆ. ಪುನಃ ಈ ನೇಮಕಾತಿಗಳನ್ನು ಪಬ್ಲಿಕ್ ಸರ್ವಿಸ್ ಕಮಿಷನಿಗೆ ವಹಿಸಬೇಕೆಂದು ತೀರ್ಮಾನ ಮಾಡಿದ್ದಾರೆಂದು ನಾನು ಕೇಳಿದ್ದೇನೆ. ಮುಖ್ಯವಾಗಿ, ಈಗ ಹೈಕೋರ್ಟಿನ ಮುಂದೆ ಈ ಆರ್ಡಿನೆನ್ಸನ್ನು ಪ್ರಶ್ನೆ ಮಾಡಿ ಒಂದು ರಿಟ್ ಅರ್ಜಿ ಇದೆ, ಮತ್ತು ಈ ಆರ್ಡಿನೆನ್ಸನ್ನು ಕಾರ್ಯಗತ ಮಾಡಬಾರದು ಎಂದು ಅವರು ಸ್ಟೇ ಆರ್ಡರು ಕೊಟ್ಟಿದ್ದಾರೆ ಎಂದು ನಾನು ಕೇಳಿದ್ದೇನೆ. ಇಲ್ಲಿ ಮಾನ್ಯ ಸದಸ್ಯರು ಆ ವಿಷಯವನ್ನು ಕುರಿತು ಚರ್ಚೆ ಮಾಡುವುದು ಸರಿಯೇ, ತಪ್ಪೇ ಎನ್ನುವುದನ್ನು ಪ್ರಸ್ತಾಪ ಮಾಡಿದ್ದರು, ಅದಕ್ಕೆ ಮಾನ್ಯ ಅಧ್ಯಕ್ಷರು ಸಮಂಜಸವಾದ ಉತ್ತರ ಕೊಟ್ಟಿದ್ದಾರೆ. ಸಹಜವಾಗಿ ಈ ಸಭೆ ಸರ್ಕಾರದವರು ಹೊರಡಿಸಬಹುದಾದ ಮತ್ತು ಹೊರಡಿಸಿರತಕ್ಕಂತ ಆರ್ಡಿನೆನ್ಸಗಳನ್ನು ವಿಚಾರ ಮಾಡಬೇಕು. ಅದನ್ನು ಅಂಗೀಕಾರ ಮಾಡುವುದು ಅಥವಾ ತಿರಸ್ಕರಿಸುವುದು ಸಭೆಗೆ ಬಿಟ್ಟಿರುವುದು. ಈ ಅಧಿಕಾರವನ್ನು ಬಹುಶಃ ಯಾವ ನ್ಯಾಯಾಲಯವೂ ತಡೆಯುವುದಕ್ಕೆ ಅಥವಾ ಕಿತ್ತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈ ಆರ್ಡಿನೆನ್ಸಿಗೆ ಸಂಬಂಧಪಟ್ಟ ಹಾಗೆ ಚರ್ಚೆಮಾಡುವುದಕ್ಕೆ ಈ ಸಭೆಗೆ ಪೂರ್ಣವಾದ ಅಧಿಕಾರವಿದೆ ಎಂದು ನಾನು ಕೂಡಾ ಭಾವಿಸುತ್ತೇನೆ. ಸ್ವಾಮಿ, ನಾನಾದರೂ, ನಿನ್ನೆ ಕೂಡಾ ನಾವು ಅಂಗೀಕಾರ ಮಾಡಿದಂತಹ ಒಂದು ಕಾನೂನು ಏನಿದೆ, ಯಾವ ಆರ್ಡಿನೆನ್ಸ್ ಹೊರಡಿಸಿದ್ದರೂ, ಅದರ ಹಿನ್ನಲೆಯಲ್ಲಿ ಕೂಡಾ ಇಂಥದ್ದೇ ಒಂದು ನ್ಯಾಯಾಲಯದ ತೀರ್ಮಾನ ಇತ್ತು ಎಂದು ಮಾನ್ಯ ಸದಸ್ಯರು ಒಬ್ಬರು ಸಭೆಯ ಗಮನಕ್ಕೆ ತಂದರು, ಇಲ್ಲಿ ಕೆಲವು ಮುಖ್ಯವಾದ ವಿಷಯಗಳನ್ನು ನಾವು ಗಮನಿಸಬೇಕು. ಇವತ್ತು ಮಾನ್ಯ ಕಾಂಗ್ರೆಸ್ ಸದಸ್ಯರಲ್ಲೂ ಕೂಡಾ ನನ್ನ ಪ್ರಾರ್ಥನೆ ಏನೆಂದರೆ, ಈ ವಿಷಯವನ್ನು ಪಕ್ಷದ ಪ್ರಶ್ನೆಯನ್ನಾಗಿ ನೋಡದೆ, ಈ ಆರ್ಡಿನೆನ್ಸಿನ ಪರಿಣಾಮದಿಂದ ಈಗಾಗಲೇ ಕಮಿಟಿಗಳ ಮೂಲಕ ನೇಮಕ ಹೊಂದಿ, 3—4—5 ವರ್ಷ ಸೇವೆ ಸಲ್ಲಿಸಿರತಕ್ಕ ಸಹಸ್ರಾರು ನೌಕರರ ಭವಿಷ್ಯ ಏನಾಗುತ್ತದೆ ಎಂಬುದನ್ನು ನೇರವಾಗಿ ಸ್ಥಳೀಯ ಅಭ್ಯರ್ಥಿಗಳಾಗಿ ನೇಮಕ ಹೊಂದಿ ಸೇವೆ ಸಲ್ಲಿಸಿರುವ ನೌಕರರ ಭವಿಷ್ಯ ಏನಾಗುತ್ತದೆ ಎಂಬುದನ್ನು ನಾವು ವಿಚಾರ ಮಾಡಬೇಕಾಗಿದೆ. ಕಮಿಟಿಯ ಹೊರಗಡೆ ನೇಮಕ ಹೊಂದಿರುವವರಿಗೆ ನಾವು ಏನಾದರೂ ರಕ್ಷಣೆ ಕೊಡುವುದಾದರೆ ಈ ಆರ್ಡಿನೆನ್ಸನ್ನು ನಾವು ಅಂಗೀಕಾರ ಮಾಡಬಾರದು, ಪರಿಣಾಮತಃ ಸರ್ಕಾರದವರು ಸಭೆಯ ಮುಂದೆ ಮಂಡಿಸಿರತಕ್ಕ ಈ ಮಸೂದೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಇಲ್ಲದಿದ್ದಲ್ಲಿ ನಾವು ಸ್ಥಳೀಯವಾಗಿ ನೇಮಕವಾಗಿರುವವರಿಗೆ ಒಂದು ಘೋರ ಅನ್ಯಾಯವನ್ನು ಎಸಗುತ್ತಿದ್ದೇವೆ ಎಂದು ನನಗನಿಸುತ್ತಿದೆ. ಸ್ವಾಮೀ, ಈ ಅಧ್ಯಾದೇಶವನ್ನು ನೀಡುವುದಕ್ಕೆ ರಾಜ್ಯಾಂಗದ 213ನೇ ವಿಧಿ ಅವಕಾಶ ಕೊಡುತ್ತದೆ. 213 (2 (ಎ) ಪ್ರಕಾರ ನಮ್ಮ ಮುಂದೆ ಅವರು ಒಂದು ಹೇಳಿಕೆಯನ್ನು ಈ ಮಸೂದೆಗೆ ಲಗತ್ತಿಸಿದ್ದಾರೆ. ಅದರಲ್ಲಿ

"Consequent upon certain judicial proceedings in which recruitment to Class III posts in the Mysore State Civil and a Divisional Level Recruitment Committee were held to be invalid, it became necessary to undertake immediate legislation to validate such recruitments to avoid difficulties in the administration of several departments. As the Houses of Legislature were not in session, the Ordinance was promulgated to validate the recruitments". ಎಂದು ಇದೆ

ಈ ಕಾನೂನನ್ನು ಪ್ರತ್ಯೇಕವಾಗಿ ಈ ಸಭೆಯ ಮುಂದೆ ತರಬಹುದಾಗಿತ್ತು, ಎಂದು ಹೇಳುವುದಾದರೆ ನಮ್ಮಲ್ಲಿ, ನಮ್ಮ ಸರ್ಕಾರದವರು ಈ ಮಾನ್ಯ ಸಭೆಯನ್ನು ಕಾಲಕಾಲಕ್ಕೆ ಕರೆದು ಇಂಥ ಕಾನೂನುಗಳನ್ನು ರಚನೆಮಾಡಿಕೊಳ್ಳತಕ್ಕಂತ ಒಂದು ಅಭ್ಯಾಸವನ್ನು ಏಕೋ ಅಷ್ಟಾಗಿ ಪರಿಪಾಲನೆ ಮಾಡುತ್ತಾ ಇಲ್ಲ. ಇಂತಹ ಸಮಯದಲ್ಲಿ ಆರ್ಡಿನೆನ್ಸ್ ಹೊರಡಿಸುವುದೇ ಅವರಿಗೆ ಹೆಚ್ಚು ಅನುಕೂಲವಾಗಿಯೂ ಕಾಣಬಹುದು. ಇನ್ನೂ ಎಷ್ಟೋ ಸಲ ಲೆಜಿಸ್ಲೇಚರ್ ಸೇರಿದಾಗ ಕೂಡಾ ಈ ಸಭೆಯಲ್ಲಿ ಅಂತಹ ಕಾನೂನನ್ನು ತಂದು ಪಾಸು ಮಾಡುವುದು ಸಾಧ್ಯವಿಲ್ಲವೆಂದು ಕಂಡಾಗ ಲೆಜಿಸ್ಲೇಚರ್ ಪ್ರೊರೋಗ್ ಮಾಡಿ ಆರ್ಡಿನೆನ್ಸ್ ಹೊರಡಿಸಬಹುದು ಎಂದು ಕೂಡಾ ರಾಜ್ಯಾಂಗದ

ಒಂದು ಕಡೆ ಅಧಿಕಾರವನ್ನು ಸರ್ಕಾರಕ್ಕೆ ಎಕ್ಸಿಕ್ಯೂಟಿವ್‌ಗೆ ಕೊಟ್ಟಿದ್ದಾರೆ. ಇವತ್ತು
ಈ ಅಧ್ಯಾದೇಶವನ್ನು ಹೊರಡಿಸುವುದರಲ್ಲಿ ಸರ್ಕಾರ ತನ್ನ ಕರ್ತವ್ಯಪಾಲನೆ ಮಾಡುವುದರಲ್ಲಿ
ತಪ್ಪು ಮಾಡಿದೆ ಎಂದು ಹೇಳಬೇಕಾಗುತ್ತದೆ. ರಾಜ್ಯಾಂಗ ರಾಜ್ಯಪಾಲರಿಗೆ ಏನೊಂದು ಅಧಿಕಾರ
ವನ್ನು ಕೊಡುತ್ತದೆ ಆ ಅಧಿಕಾರವನ್ನು ಅವರು ಸರಿಯಾಗಿ ಉಪಯೋಗಿಸಿಕೊಂಡಿಲ್ಲ ಅಂತ ಕೂಡ
ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ, ಸ್ವಾಮಿ, ಆರ್ಡಿನೆನ್ಸ್ ಏನು ಇವತ್ತು ನಮ್ಮ ಮುಂದೆ
ಮಸೂದೆ ಆಗುವುದಕ್ಕೆ ಬಂದಿದೆ ಇದರಲ್ಲಿ ಸರ್ಕಾರದವರು ಬಹಳ ಜಾಣ್ಮೆಯಿಂದ ತಮ್ಮ ತಪ್ಪು
ಗಳನ್ನು ಕಾನೂನು ಬದ್ಧವಾಗಿ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ. ಯಾವ
ತಪ್ಪುಗಳನ್ನು ಮಾಡಿದ್ದಾರೆ ಅವು 1961 ನೇ ಇಸವಿಯಿಂದ ಈ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ
ಮೇಲಿಂದ ಮೇಲೆ ನಡೆದಿವೆ. ಮತ್ತು ಇವತ್ತು ಈ ಪ್ರಕ್ರಿಯೆ ಈಗಿನಂತೆ ಮುಂದುವರಿಯುವುದಕ್ಕೆ
ಸಾಧ್ಯವಿಲ್ಲ ಎನ್ನುವುದು ಅವರಿಗೂ ಮನಗಂಡ ಮೇಲೆ ಇದನ್ನು ಕ್ರಮಪಡಿಸಬೇಕು, ಕಾನೂನುಬದ್ಧ
ಗೊಳಿಸಬೇಕೆಂದು ಇವತ್ತು ಕಾನೂನು ತರುವುದಕ್ಕೆ ಹೊರಟಿದ್ದಾರೆ. ಈ ಸಭೆ ಅಧಿವೇಶನದಲ್ಲಿ
ಇಲ್ಲದೇ ಇದ್ದಾಗ ಸುಗ್ರೀವಾಜ್ಞೆಯನ್ನು, ಅಧ್ಯಾದೇಶವನ್ನು ಹೊರಡಿಸಿ ಈ ಒಂದು ಗಂಡಾಂತರ
ದಿಂದ ಸರ್ಕಾರ ಪಾರಾಗುವುದಕ್ಕೆ ಪ್ರಯತ್ನ ಮಾಡಿದೆ. ಈ ಪ್ರಯತ್ನವನ್ನು ನಾವು ಹಿಂಬದಿ ಬಾಗಿ
ಲಿನ ಪ್ರಯತ್ನ ಎಂದು ಹೇಳಬಹುದು, ಇದು ಒಂದು ದೊಡ್ಡ ರಾಜಮಾರ್ಗ ನೇರಮಾರ್ಗ ಇದನ್ನು
ಮಾಡಿ ದೇಶಕ್ಕೆ ಕಲ್ಯಾಣವಾಗಿದೆ ಎಂದು ನಾವು ಭಾವಿಸುವುದಿಲ್ಲ. ಏಕೆಂದರೆ ಇದರಲ್ಲಿ ಎರಡು
ಅಂಶ ಇದೆ. ನಿನ್ನೆ ತಾವು ಬಿಲ್ಲುಗಳನ್ನು ಪಾಸ್ ಮಾಡಿದಿರಿ. ಬೆಳಗಾಂ ಮುನಿಸಿಪಾಲಿಟಿ ಒಂದು
ಬಿಟ್ಟು ಬಾಕಿ ಗ್ರಾಮ ಪಂಚಾಯಿತಿಗಳು ತಾಲ್ಲೂಕು ಬೋರ್ಡುಗಳು ಮತ್ತು ಮುನಿಸಿಪಾಲಿಟಿಗಳು
ಯಾವ ಜರೂರು ಪರಿಸ್ಥಿತಿಯ ಉತ್ಪಾತಕ್ಕೂ ತುತ್ತಾಗಿರಲಿಲ್ಲ. ಅವು ಕಾನೂನು ಅಸ್ತಿತ್ವ ಕಳೆದು
ಎಷ್ಟೋ ಕಾಲ ಆಗಿಹೋಗಿದೆ. ತಾವು ಮಾತ್ರ ಅದರ ಬಗ್ಗೆ ಏನೂ ಮಾಡಲಾರದೆ ಕಾಲವನ್ನು ಕಳೆ
ಯುತ್ತ ಜೀವದಾನ ಮಾಡುತ್ತಾ ಹೋಗಿದ್ದೀರಿ. ಈ ಒಂದು ರಿಕ್ರೂಟ್‌ಮೆಂಟ್ ಮಾಡತಕ್ಕ ವಿಷ
ಯವೂ ಕೂಡ 1961 ನೇ ಇಸವಿಯಿಂದ ಸರ್ಕಾರದ ಮುಂದೆ ಇದೆ. ಮುಖ್ಯಮಂತ್ರಿಗಳು ಒಂದು
ವಿಷಯವನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡಿದರು. ತುರ್ತು ಪರಿಸ್ಥಿತಿ ಇದ್ದ ಪ್ರತಿಯೊಂದು ವಿಷ
ಯಕ್ಕೂ ನೌಕರರು ಹೈಕೋರ್ಟಿಗೆ ಹೋಗಿ, ರಿಟ್ ಪಿಟಿಷನ್ ಹಾಕಿ ಪ್ರಶ್ನೆ ಮಾಡತಕ್ಕದ್ದು ಉಚಿತ
ವಲ್ಲ ಎಂಬ ಅಭಿಪ್ರಾಯವನ್ನು ಅವರು ತಿಳಿಸಿದರು. ನನಗೆ ಆಶ್ಚರ್ಯವಾಗುತ್ತದೆ. ಅನ್ಯಾಯ
ವಾಗಿಲ್ಲ ಎಂದು ಭಾವಿಸುವ ವ್ಯಕ್ತಿ ಯಾರೂ ಕೂಡ ಕೋರ್ಟಿಗೆ ಹೋಗಿ ಪ್ರಶ್ನೆ ಮಾಡುವುದಕ್ಕೆ
ಹೋಗುವುದಿಲ್ಲ. ಸಾಮಾನ್ಯವಾಗಿ ಯಾರಿಗೆ ಅನ್ಯಾಯವಾಗಿದೆ ಅಂತ ಭಾವಿಸುತ್ತಾರೆಯೋ,
ನ್ಯಾಯ ದೊರಕಿಲ್ಲ ಎಂದು ಭಾವಿಸುತ್ತಾರೆಯೋ ಅವರು ಕೋರ್ಟಿಗೆ ಹೋಗುತ್ತಾರೆ. ಈ ಮೂಲ
ಭೂತವಾದ ಹಕ್ಕನ್ನು ರಾಜ್ಯಾಂಗ ಅವರಿಗೆ ಕೊಡುತ್ತದೆ. ಅಲ್ಲಿ ಅವರು ನ್ಯಾಯವನ್ನು ದೊರಕಿಸಿ
ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ನಾವು ಮಾಡುವ ಕಾನೂನುಗಳನ್ನು, ಸರ್ಕಾರ ಹೊರಡಿ
ಸುವ ಆಜ್ಞೆಗಳನ್ನು ಜನ ಮರುಮಾತನಾಡದೇ ಒಪ್ಪಿಕೊಳ್ಳಬೇಕು, ಎಮರ್ಜೆನ್ಸಿ ಇದ್ದಾಗಲೂ ಕೂಡ
ಸಾಮಾನ್ಯ ನಡವಳಿಕೆ, ಕಾನೂನು ಬದ್ಧವಾದ ಆಡಳಿತ ರಾಜ್ಯದಲ್ಲಿ ಅಥವಾ ದೇಶದಲ್ಲಿ ಇರುವ ತನಕ
ಜನ ಆ ಅನುಕೂಲಗಳನ್ನು, ಸೇವೆಗಳನ್ನು, ಅವಕಾಶಗಳನ್ನು ಉಪಯೋಗಿಸಿಕೊಂಡೇ ಉಪಯೋಗಿಸಿ
ಕೊಳ್ಳುತ್ತಾರೆ. ಮಿಲಿಟರಿ ಡಿಕ್ಟೇಟರ್‌ಷಿಪ್ ಬಂದು ಪಾರ್ಲಿಮೆಂಟ್ ಮತ್ತು ಇತರ ಸಂಸ್ಥೆಗಳ
ನ್ನೆಲ್ಲಾ ರದ್ದುಪಡಿಸಿದರೆ, ಮಿಲಿಟರಿ ಕಾನೂನಿನ ಪ್ರಕಾರ ರಾಜ್ಯಭಾರ ಮಾಡುತ್ತಾರೆ ಎಂದು
ಹೇಳಿದಾಗ ಅವರು ಏನು ಹೇಳುತ್ತಾರೆಯೋ ಆ ರೀತಿ ಕೆಲಸ, ವ್ಯವಹಾರ, ಆಡಳಿತ ನಡೆಯಬೇಕಾ
ಗುತ್ತದೆ. ನಡೆಯುವುದು ಅನಿವಾರ್ಯ, ಅಂತಹ ಸಂದರ್ಭ ಬಂದಾಗ ಆ ಮಾತು ಸಮಂಜಸ
ಎಂದು ಅನಿಸುತ್ತದೆ. ನಾನಾದರೂ ನನ್ನ ಈ ಒಂದು ನಿರ್ಣಯ ಏನಿದೆ ಇದನ್ನು ಕೊಡುವಾಗ
ಬಹಳವಾಗಿ ಯೋಚನೆ ಮಾಡಿ, ವಿಚಾರ ಮಾಡಿ ಈ ಸಭೆಯ ಮುಂದೆ ಈ ನಿರ್ಣಯವನ್ನು ತಂದಿ
ದ್ದೇನೆ. ಈ ಆರ್ಡಿನೆನ್ಸನ್ನು ಮಾನ್ಯ ಸಭೆ ಒಪ್ಪಬಾರದು, ತಿರಸ್ಕರಿಸಬೇಕು ಎನ್ನುವುದೇ ಮುಖ್ಯ
ವಾದ ಉದ್ದೇಶ. ಈ ಆರ್ಡಿನೆನ್ಸ್ ಈ ಸಭೆಯಲ್ಲಿ ತಿರಸ್ಕರಿಸಲ್ಪಟ್ಟರೆ ಮುಂದೆ ಈ ಮಾನ್ಯ ಸಭೆಯಲ್ಲಿ
ಸರ್ಕಾರದವರು ಒಂದು ಮಸೂದೆಯನ್ನು ಮಂಡಿಸಿ ಕಾನೂನನ್ನು ಮಾಡತಕ್ಕ ಒಂದು ಅವಕಾಶ
ವನ್ನು ತಿರಸ್ಕರಿಸಿದಂತಾಗುತ್ತದೆ. ಮಾನ್ಯ ದೇವರಾಜ ಅರಸ್ ಅವರು ಈ ಮಸೂದೆಗೆ ಇನ್‌ಚಾರ್ಜ್
ಆಗಿದ್ದಾರೆ, ಸಂಬಂಧಪಟ್ಟ ಮಂತ್ರಿಗಳು ಇಲ್ಲದೇ ಈ ರೀತಿ ಇನ್‌ಚಾರ್ಜ್ ಆಗಿದ್ದಾರೋ ಏನೋ
ಗೊತ್ತಿಲ್ಲ. ಅವರು ಸಾಮಾನ್ಯ ಉದ್ದೇಶದಲ್ಲಿ ನಾವು ಒಳ್ಳೆಯ ಕೆಲಸ ಮಾಡುವುದಕ್ಕೆ ಹೋಗುತ್ತೇವೆ
ಎಂದು ಹೇಳಿದ್ದಾರೆ. ತಮಗೆ ತಿಳಿದಿದೆಯೋ ಇಲ್ಲವೋ ಇದರಿಂದ ಎಷ್ಟೋ ಜನ ನೌಕರರು ಈಗಾ
ಗಲೇ 3-4 ಇನ್‌ಕ್ರಿಮೆಂಟ್ ಪಡೆದವರೂ ಇದ್ದಾರೆ. ಕೆಲಸಕ್ಕೆ ಸೇರಿಕೊಂಡು 28 ವರ್ಷ ಆಗಿದ್ದ
ವರು ಪುನಃ ರಿಕ್ರೂಟ್‌ಮೆಂಟ್ ಆಗಬೇಕೆಂದರೆ ಆ ರೀತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದು
ಒಂದನೆಯದು. ಇನ್ನು 3-4 ವರ್ಷ ಸೇವೆಯನ್ನು ಮಾಡಿದ್ದರೆ ಆ ಸೇವೆಯನ್ನು ಅವರಿಗೆ ತುಂಬಿ

(ಶ್ರೀ ಎಸ್. ಗೋಪಾಲ ಗೌಡ)

ಕೊಡದೇ ಹೋದರೆ, ಸರ್ವಿಸಸ್‌ನಲ್ಲಿ ಅವರ ಸೇವೆಗಳನ್ನು, ಕೆಲಸವನ್ನು ರೆಗ್ಯೂಲರೈಸ್ ಮಾಡದೇ ಹೋದರೆ, ಅಂತಹವರು ಸುಮಾರು ಮೂರೂವರೆ ನಾಲ್ಕು ಸಾವಿರ ಜನ ಇದ್ದಾರೆ ಅವರಿಗೆ ತೊಂದರೆ ಯಾಗುತ್ತದೆ. ಎಂದು ಕೇಳಿದ್ದೇನೆ, ತಮ್ಮ ಹತ್ತಿರ ಕರಾರುವಾಕ್ಕಾದ ನಂಬರು ಇರಬಹುದು, ಈ ಆರ್ಡಿನೆನ್ಸನ್ನು ಹೊರಡಿಸುವ ಬಗ್ಗೆ ರಾಜ್ಯಪಾಲರಿಗೆ ತೃಪ್ತಿಯಾದರೆ 'ಇಫ್ ಹೀ ಈಸ್ ಸ್ಯಾಟಿಸ್ ಫೈಡ್' ಎಂದು ಒಂದು ಮಾತಿನಲ್ಲಿ ಹೇಳಿದ್ದಾರೆ. ಅದರಲ್ಲಿ ಏನಾದರೂ ಮಾಲಾ ಫೈಡಿ ಇನ್‌ಟೆನ್‌ಷನ್ ಇತ್ತೇ ಎನ್ನುವುದು ಪ್ರಶ್ನೆ.

[MR. DEPUTY SPEAKER in the Chair.]

"As in the case of an ordinance made by the President the court cannot question the validity of the ordinances made by the Governor on the ground that there were not sufficient reasons for promulgating the ordinance or that it was made with *mala-fide* for simply to circumvent judicial decisions. The only question with which the courts are concerned is only one of legislative competence."

10-00 A.M.

ಇಲ್ಲಿ ನ್ಯಾಯಾಲಯವನ್ನೇನೂ ಪ್ರಶ್ನೆ ಮಾಡತಕ್ಕಂಥ ಸಂಭವವೇನೂ ಇಲ್ಲ. ಆದರೆ ನಾವು ಇವತ್ತು ನ್ಯಾಯಾಲಯಗಳು ಕೊಡತಕ್ಕಂಥ ತೀರ್ಮಾನ ಅಥವಾ ನಿರ್ಣಯಕ್ಕೆ ವಿರುದ್ಧವಾಗಿ ಕಾನೂನುಗಳನ್ನು ರಚನೆ ಮಾಡಬೇಕೇ, ಯಾವುದನ್ನು ನ್ಯಾಯಾಲಯ ನ್ಯಾಯವಲ್ಲ ಎಂದು ಹೇಳುತ್ತದೆ ಅದು ನ್ಯಾಯವಾಗಿದೆ ಎಂದು ನಾವು ಹೇಳುವುದಕ್ಕೆ ಕಾನೂನು ಮಾಡಬೇಕೆ, ಈ ಒಂದು ಪರಂಪರೆ ಅಥವಾ ಇದೇ ರೀತಿ ನಾವು ಮುಂದುವರೆಯುವುದಾದರೆ ಇರತಕ್ಕ ಕಾನೂನು ಕಾಯಿದೆಗಳ ಆಧಾರದ ಮೇಲೆ ನಾವು ನ್ಯಾಯಾಲಯವನ್ನು ಪ್ರಶ್ನೆ ಮಾಡಿ ಅದು ನ್ಯಾಯವಾದದ್ದಲ್ಲ ಎಂದು ಹೇಳಿದ್ದಕ್ಕೆಲ್ಲಾ ನಾವು ಹೊಸ ಹೊಸ ಕಾನೂನನ್ನು ತಂದು ಕಾನೂನು ಮಾಡುವ ಪದ್ಧತಿಯನ್ನು ಮುಂದುವರಿಸಿ ಕೊಂಡು ನಾವು ಮಾಡಿರಬಹುದಾದ ತಪ್ಪುಗಳನ್ನು ಅಥವಾ ಕ್ರಮಬದ್ಧವಲ್ಲದ ಕೃತ್ಯಗಳನ್ನು ಕ್ರಮ ಬದ್ಧವಾಗೇ ನಡೆದಿದೆ ಎಂದು 1961 ರಿಂದ ಭಾವಿಸಿಕೊಳ್ಳತಕ್ಕದ್ದು, ಈ ಒಂದು ಭಾವನೆಯನ್ನು ಅಥವ ತೀರ್ಮಾನವನ್ನು ಯಾವ ನ್ಯಾಯಾಲಯವೂ ಪ್ರಶ್ನಿಸುವಂತಿಲ್ಲ ಎಂದು ನಿಮಗೆ ಬರೆದುಕೊಳ್ಳು ವುದಕ್ಕೆ ನಮಗೆ ಅಧಿಕಾರವಿದೆ. ಆದರೆ ಆ ರೀತಿ ಬರೆದುಕೊಳ್ಳುತ್ತಾ ಹೋಗುವುದು ಪರಿಣಾಮತಃ ಯಾವರೀತಿ ಆದೀತು ಎಂಬುದನ್ನು ನಾವು ವಿಚಾರಮಾಡಬೇಕು. ಆದರೆ ಪ್ರತಿ ಸಲ ಇಂಥ ಘಟನೆ ನಡೆದಾಗಲೆಲ್ಲಾ ಹೀಗೆ ಮಾಡುವುದು ಸರಿಯೇ? ಸರಕಾರದ ಆಶಯವೇನಿರುತ್ತದೆ ಅದರ ಪ್ರಕಾರ ಮಾಡಿರಬಹುದು. ಆದರೆ ದುರುದ್ದೇಶವಿರುತ್ತದೆ ಎಂದು ಹೇಳುವುದಿಲ್ಲ. ಯಾವುದೇ ಕೆಲಸವನ್ನು ಸರಕಾರ ಮಾಡುವಾಗ ಅದನ್ನು ಕಾನೂನುಬದ್ಧವಾಗಿ ಮಾಡಬೇಕು. ಒಂದು ವೇಳೆ ತಪ್ಪಾಗಿದ್ದರೆ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಪಡಬೇಕು. ತಪ್ಪುಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಕೊನೆಗೆ ಕಾನೂನು ಮಾಡುವ ಅಧಿಕಾರವನ್ನು ಉಪಯೋಗಿಸಿಕೊಂಡು ಕ್ರಮಬದ್ಧಗೊಳಿಸುವುದು ಸರಿಯಾದ ಮಾರ್ಗವಾಗುವುದಿಲ್ಲವೆಂದು ತೋರುತ್ತದೆ. ಅನಿವಾರ್ಯವಾದಾಗ ಈ ಅಧಿಕಾರವನ್ನು ಸರಕಾರ ಶಾಸನ ಸಭೆಯ ಮುಂದೆ ಕಾನೂನನ್ನು ತಂದು ಪಡೆದು ಆ ಮೂಲಕ ಉಪಯೋಗಿಸಿ ಕೊಳ್ಳುವುದು ಪೂರ್ಣವಾಗಿ ತಪ್ಪು ಎಂದು ನಾನು ಹೇಳುವುದಿಲ್ಲ. ಅಂಥ ಸನ್ನಿವೇಶ ಬರುತ್ತದೆ. ಆದರೆ ಈ ಎರಡೂ ಆರ್ಡಿನೆನ್ಸ್‌ಗಳಿಗೆ ಹೈಕೋರ್ಟ್ ನಿರ್ಣಯವೇ ಕಾರಣ, ಅದು ಸರಕಾರ ತಕ್ಷಣ ಕ್ರಮ ತೆಗೆದುಕೊಳ್ಳಲು ಪ್ರೇರಣೆ ಮಾಡಿದೆ. ತಮ್ಮ ಮಸೂದೆಯಲ್ಲೇ ಕೊನೆಯ ಪುಟದಲ್ಲಿ ಈ ರೀತಿ ನಮೂದು ಮಾಡಿದೆ:

"Consequent upon certain judicial proceedings in which recruitment to class III post in the Mysore State Civil Services made by the State Level Recruitment Committee."

ಇದಕ್ಕೇನು ಹೇಳುವುದು ? ಆಹಾರದ ವಿಷಯದಲ್ಲಿ ಅಥವಾ ನಿರುದ್ಯೋಗಿಗಳಿಗೆಲ್ಲಾ ಉದ್ಯೋಗ ಕೊಡುವ ವಿಷಯದಲ್ಲಿ ಅಥವ ಇನ್ನ್ಯಾವುದಾದರೂ ಮಹತ್ತರವಾದ ದೇಶ ಸೇವೆ ಕೆಲಸ ಮಾಡುವುದಕ್ಕೆ ಮಾಡಬಹುದು, ಆದೇಶ ಕೊಡಬಹುದು. ಆದರೆ ಪದೇ ಪದೇ ಇರುವ ಅಧಿಕಾರವನ್ನು ಉಪಯೋಗಿಸಿ ವಿಧಾನಸಭೆ ಸೇರುವುದಕ್ಕೆ ಬಹಳ ಕಾಲವಾಗುತ್ತದೆ, ಅದರಿಂದ ಜನರಿಗೆ ತೊಂದರೆ ಯಾಗುತ್ತದೆ ಎಂದು ಹೀಗೆ ಆರ್ಡಿನೆನ್ಸ್ ಹೊರಡಿಸಿದರೆ ಪ್ರಶಂಶೆ ಮಾಡಬಹುದೇ ? ಒಳ್ಳೆಯ ಕೆಲಸ ಮಾಡುವುದಕ್ಕೆ ಇರುವ ಅಧಿಕಾರ ಉಪಯೋಗಿಸುವುದಿಲ್ಲ. ಸರಕಾರಕ್ಕೆ ಇಕ್ಕಟ್ಟಾದಾಗ, ತನ್ನ ಮುಖ ಹೋಗುತ್ತದೆ ಎಂದು ಕಂಡಾಗ ಮುಖ್ಯವಾಗಿ ಇಂಥ ಶಾಸನ ಮಾಡಲು ಇರುವ ಅಧಿಕಾರ ವನ್ನು ಉಪಯೋಗಿಸಿಕೊಳ್ಳುತ್ತದೆ. ಇದು ಹಿತಕರವಾದ ಕ್ರಮವಲ್ಲ. ಕೇವಲ ಸರಕಾರ ತನ್ನ ತಪ್ಪುಗಳನ್ನು ಮುಚ್ಚಿಕೊಳ್ಳುವುದಕ್ಕೆ ಈ ಒಂದು ಅಧಿಕಾರವನ್ನು ಉಪಯೋಗಿಸಿಕೊಂಡಿದೆ. ಇದು ಖಂಡಿತ ಅಧಿಕಾರದ ದುರುಪಯೋಗ ಎಂದು ನಾವು ಹೇಳಲೇಬೇಕಾಗಿದೆ. ಈ ಅಧಿಕಾರದ ದುರುಪ ಯೋಗವನ್ನು ಸರಕಾರ ಮಾಡಿಕೊಳ್ಳಬಾರದು. ವಿಧಾನ ಸಭೆಯನ್ನು ಕಾಲಕಾಲಕ್ಕೆ ಕರೆಯದೆ ತಮಗೆ ಬೇಕಾದಾಗ ಆರ್ಡಿನೆನ್ಸ್ ಪಾಸು ಮಾಡಿಕೊಳ್ಳುವುದು ಉಚಿತವಲ್ಲ. 1961 ರಿಂದ ಈ ವಿಷಯ ವಿದೆ. ಇನ್ನೂ ಸರಕಾರಕ್ಕೆ ತೃತೀಯ ದರ್ಜೆ ನೌಕರರ ರಿಕ್ರೂಟ್‌ಮೆಂಟ್ ಬಗ್ಗೆ ಸರಿಯಾದ ನೀತಿಯನ್ನನು ಸರಿಸುವುದಕ್ಕೆ ಸಾಧ್ಯವಾಗಿಲ್ಲ. ರಾಜಕೀಯ ಕಾರಣಗಳಿಗಾಗಿ ಹೀಗೆ ಮಾಡುತ್ತಾರೋ ಅಥವಾ ಬೇರೆ ಕಾರಣಗಳಿಗಾಗಿ ಮಾಡುತ್ತಾರೋ ಗೊತ್ತಾಗುವುದಿಲ್ಲ. ಪಬ್ಲಿಕ್ ಸರ್ವಿಸ್ ಕಮಿಷನ್ ಅಧಿಕಾರವನ್ನು ಪ್ರತ್ಯೇಕ ಪಡಿಸಿದರೆ ಬಹಳ ಅನುಕೂಲವಾಗುತ್ತದೆ, ಬೇಗ ಕೆಲಸ ಮಾಡಬಹುದು, ಇಲ್ಲದಿದ್ದರೆ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಕೆಲಸ ಹೆಚ್ಚಾಗುತ್ತದೆ ಎಂದು ಕಾರಣ ತೋರಿಸಿ ಈ ಸಮಿತಿ ಮಾಡಿದರು. ಈ ಸಮಿತಿ ನೇಮಕ ಮಾಡಿದ ರೀತಿ ಸರಿಯಾಗಿಲ್ಲ ಅಂದರೆ ಯೋಗ್ಯವಾದ ಅಧಿಕಾರಿ ಅಲ್ಲಿಲ್ಲದಿರುವುದು ಮುಂತಾದ ತಪ್ಪುಗಳನ್ನೆಲ್ಲಾ ಮಾಡಿದ್ದೀರಿ. ಆದರೆ ಇವತ್ತು ಇದರಿಂದ ವ್ಯಥೆ ಪಡಬೇಕಾದವರು ಬಡ ನೌಕರರು. ಜೀವನಕ್ಕೆ ತೊಂದರೆಯಾಗಿ ಸರಕಾರಿ ಸೇವೆ ಮಾಡಲು ಮುಂದೆ ಬಂದವರನ್ನು ಕೆಲಸಕ್ಕೆ ಸೇರಿದವರನ್ನು ತಮ್ಮ ತಪ್ಪನ್ನು ತಿದ್ದಿಕೊಳ್ಳುವುದಕ್ಕಾಗಿ ಅವಸರದಲ್ಲಿ ಅವರನ್ನು ಕೈ ಬಿಡುವುದಾದರೆ ಮಹಾ ಅಪರಾಧವಾಗುತ್ತದೆ. ಅವರನ್ನೆಲ್ಲಾ ಹೇಗೆ ರೆಗ್ಯುಲರೈಸ್ ಮಾಡುತ್ತೀರಿ ! ಆ ನೇಮಕಾತಿಗಳನ್ನೆಲ್ಲಾ ಹೇಗೆ ಸರಿಪಡಿಸುತ್ತೀರಿ ! ಹೀಗೆ ಅನೇಕ ಜನರನ್ನು ತೆಗೆದುಕೊಂಡಿರುವು ದುಂಟು. ಸಹಸ್ರಾರು ಸಂಖ್ಯೆಯಲ್ಲಿ ಜನರು ಕಾದಿರುವುದು ಬೇರೆ ಮಾತು. 1961ನೆಯ ಇಸವಿ ಯಿಂದ ಈ ಸಮಿತಿಯಿದ್ದರೂ ಇರುವ ಪರಿಸ್ಥಿತಿಯನ್ನು ಸರಕಾರ ಮನಗಂಡು ನ್ಯಾಯವಾಗಿ ನಡೆಯುತ್ತಿಲ್ಲ ಎಂದು ಕಂಡರೂ ಇಷ್ಟು ದೀರ್ಘ ಕಾಲ ಮುಂದುವರೆಸಿ ಈ ಸಭೆ ಅಧಿವೇಶನದಲ್ಲಿ ಇಲ್ಲದಿರುವಾಗ ಆರ್ಡಿನೆನ್ಸ್ ಹೊರಡಿಸಿ ಕ್ರಮಪಡಿಸುವುದು ಸಮಂಜಸವಾದ ಕೆಲಸವಲ್ಲ.

ಇಂಥ ಒಂದು ಆರ್ಡಿನೆನ್ಸ್ ಏನು ಸರ್ಕಾರದವರು ಹೊರಡಿಸಿದ್ದಾರೆ, ಈ ಆರ್ಡಿನೆನ್ಸನ್ನು ಸಭೆಯವರು ತಿರಸ್ಕರಿಸಬೇಕು, ಅಂಗೀಕಾರ ಮಾಡಬಾರದು ಎಂದು ಹೇಳಿ ಮಾನ್ಯ ಸಭೆಯ ಸದಸ್ಯ ರನ್ನು ನಾನು ಪ್ರಾರ್ಥನೆ ಮಾಡಿಕೊಂಡು, ನಾನು ಸಭೆಯ ಮುಂದೆ ಮಂಡಿಸಿರುವ ನಿರ್ಣಯ ಅಂಗೀಕಾರವಾದರೆ ಮಾನ್ಯ ಸಭೆ ಈ ಮಸೂದೆಯನ್ನು ತಿರಸ್ಕರಿಸಿದಂತಾಗುತ್ತದೆ, ಅದಕ್ಕಾಗಿ ತಾವೆ ಲ್ಲರೂ ಈ ನಿರ್ಣಯಕ್ಕೆ ಬೆಂಬಲ ಕೊಡುತ್ತೀರೆಂದು ತಿಳಿದುಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಸ್ವಾಮಿ, ಈಗ ಸಭೆಯ ಮುಂದೆ ಮಂಡಿ ಸಿರತಕ್ಕ ಮೈಸೂರು ರಾಜ್ಯದ ಸಿವಿಲ್ ಸೇವೆಗಳ ಮೂರನೇ ವರ್ಗದ ಹುದ್ದೆಗಳಿಗೆ ನೇಮಕ ಮಾಡಿ ರುವುದನ್ನು (ಮಾನ್ಯಗೊಳಿಸುವುದಕ್ಕೆ ಸಂಬಂಧಪಟ್ಟ) ವಿಧೇಯಕ, 1965 ಏನಿದೆ ಅದನ್ನು ಬಹಳ ಕಟುವಾದ ರೀತಿ ಟೀಕೆ ಮಾಡಬೇಕಾದ ಪ್ರಸಂಗ ನಮ್ಮ ಮುಂದೆ ಬಂದಿದೆ. ಸರ್ಕಾರ ಮಾಡಿರುವ ಪಾಪವೇನಿದೆ ಅದರಿಂದ ವಿಮುಕ್ತಿ ಮಾಡಿಕೊಳ್ಳುವುದಕ್ಕೆ ಈ ಮಸೂದೆಯನ್ನು ತಂದಿದ್ದಾರೆಂದರೆ ತಪ್ಪಾಗಲಾರದು. ಕಾರಣವಾದರೂ ಇಷ್ಟೇ. ಸರ್ಕಾರದವರು 1961 ರಲ್ಲಿ ಬಹಳ ದೋಷದಿಂದ ಕೂಡಿರತಕ್ಕ ರಿಕ್ರೂಟ್‌ಮೆಂಟ್ ಕಮಿಟಿಗಳನ್ನು ಮಾಡಿದರು. ಆ ಸಮಿತಿಗಳು ಮಾಡಿರತಕ್ಕ ಅನ್ಯಾಯ ಮತ್ತು ಅನೀತಿಯುತವಾದ ನಡವಳಿಕೆಗಳೇನಿವೆ ಅವುಗಳನ್ನು ನ್ಯಾಯ, ಸರಿ, ಎಂದು ಘೋಷಣೆ ಮಾಡತಕ್ಕ ಅಧಿಕಾರವನ್ನು ಕೊಡುವುವರ ಬಗ್ಗೆ ಈ ವಿಧೇಯಕವನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ನೌಕರಿಗಳಿಗೆ ಜನರನ್ನು ನೇಮಕ ಮಾಡುವ ಬಗ್ಗೆ ಒಂದು ಪ್ರಶ್ನೆಯನ್ನು ಹಾಕಿ ಈ ಸಭೆಯಲ್ಲಿ ಅದಕ್ಕೆ ಉತ್ತರವನ್ನು ಪಡೆದಿದ್ದೇವೆ. ಆ ದಿವಸ ಮಂತ್ರಿಗಳು ಕೊಟ್ಟ ಉತ್ತರಗಳಿಂದ ಮಾನ್ಯ ಮಂತ್ರಿಗಳು ಸಮಂಜಸವಾದ ಉತ್ತರವನ್ನು ಕೊಟ್ಟು ಸಮರ್ಥನೆ ಮಾಡಿಕೊಳ್ಳತಕ್ಕ ಶಕ್ತಿ ಅವರಲ್ಲಿಲ್ಲ ಎಂದು ನಮಗೆ ಗೊತ್ತಾಗಿದೆ. ನಾನು ಏಕೆ ಹೇಳುತ್ತಿದ್ದೇನೆಂದರೆ, ಸರ್ಕಾರದ ಕಿವಿಗೆ ನ್ಯಾಯವಾದ ಮಾತು ಬೀಳುವುದಿಲ್ಲ. ಈ ದಿವಸ ಯಾರು ಕೆಲಸವನ್ನು ಕಳೆದುಕೊಂಡಿದ್ದಾರೋ ಅವರು ಏನೂ ಆಸರೆ ಇಲ್ಲದೆ ತಬ್ಬಲಿಗಳಾಗಿದ್ದಾರೆ. ಸ್ಟೇಟ್ ಲೆವಲ್ ರಿಕ್ರೂಟ್‌ಮೆಂಟ್ ಕಮಿಟಿ,

(ಶ್ರೀ ಹೆಚ್. ಡಿ. ದೇವೇಗೌಡ)

ಡಿವಿಜನಲ್ ಲೇಬರ್ ರಿಕ್ರೂಟ್‌ಮೆಂಟ್ ಕಮಿಟಿ, ಇವರು ಮಾಡಿರತಕ್ಕ ಕೆಲವು ಲೋಪ ದೋಷಗಳನ್ನು ವಿಮರ್ಶೆ ಮಾಡುವುದಾದರೆ ಈ ಸರ್ಕಾರದ ಆಶ್ರಯದಲ್ಲಿರತಕ್ಕ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಲ್ಲಿ ಯಾರು ಹೆಸರುಗಳನ್ನು ರಿಜಿಸ್ಟರ್ ಮಾಡಿಸಿ ತನ್ಮೂಲಕ ಯೂನಿಟ್ ಆಫೀಸುಗಳಿಗೆ ನೇಮಕ ಮಾಡಲ್ಪಟ್ಟಿದ್ದರೋ ಅಂಥ ಅಧಿಕಾರಿಗಳು ಸುಮಾರು ಎಂಟು, ಹತ್ತು ವರ್ಷ ಕೆಲಸ ಮಾಡಿರುವವರು, ಆರೇಳು ಇನ್‌ಕ್ರಿಮೆಂಟುಗಳನ್ನು ಪಡೆದಿರುವವರು ಈ ಕಮಿಟಿಗಳು ಮಾಡಿರುವ ಅನ್ಯಾಯದಿಂದ ಕೆಲಸಕಾರ್ಯವಿಲ್ಲದೆ ತಬ್ಬಲಿಗಳಾಗಿದ್ದಾರೆ. ಇಂಥವರಿಗೆ ಯಾವ ರೀತಿ ಸರ್ಕಾರ ಪರಿಹಾರವನ್ನು ಕೊಡುತ್ತದೆ? ಎಂಟು ಹತ್ತು ವರ್ಷ ಕೆಲಸ ಮಾಡಿರುವವರನ್ನು ಬಿಟ್ಟು ಬೇರೆ ರೀತಿಯಲ್ಲಿ ಆಯ್ಕೆ ಮಾಡಿರುವುದಕ್ಕೆ ಯಾರು ಜವಾಬ್ದಾರರು? ಅವರು ಮಾಡಿರುವುದು ಸರಿಯೇ? ಅವರು ಮಾಡಿರತಕ್ಕ ತಪ್ಪುಗಳನ್ನು ಸರಿ ಮಾಡಬೇಕೆಂದು ತಂದಿರುವ ಈ ಮಸೂದೆಯಿಂದ ಎಷ್ಟು ಮಟ್ಟಿಗೆ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದೀರಿ ಇದರಿಂದ ಒಂದು ವರ್ಗಕ್ಕೆ ಮನ್ನಣೆಯನ್ನು ಕೊಡುತ್ತಿದ್ದೀರಿ ಎಂದು ಕೇಳುತ್ತೇನೆ. ಇಂಥ ವಿಧೇಯಕವನ್ನು ತಂದಿರುವುದರಿಂದ ಅನೇಕ ಜನ ತಬ್ಬಲಿ ಮಕ್ಕಳಾಗಿ, ಬೀದಿ ಬೀದಿ ಅಲೆಯುತ್ತಿದ್ದಾರೆ. ಇದನ್ನು ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಿಂದ ಹೆಸರು ತರಿಸಿಕೊಂಡವರನ್ನು, ಕೆಲಸದಲ್ಲಿದ್ದವರನ್ನು, ಹೊರಗಟ್ಟಿ ಅವರ ಸ್ಥಾನಕ್ಕೆ ಬೇರೆಯವರನ್ನು ಆರಿಸಿದ್ದೀರಿ. ಈ ಜನರನ್ನು ಅನ್ಯಾಯವಾಗಿ ಹೊರದೂಡಿದ್ದೀರಿ. ಈ ಬಗ್ಗೆ ಸಂಬಂಧಪಟ್ಟ ಯೂನಿಟ್ ಆಫೀಸುಗಳಿಂದ ರಿಪೋರ್ಟುಗಳನ್ನು ತರಿಸಿ ಸಭೆಯ ಮುಂದೆ ಇಡುವುದಾದರೆ ಈ ಎರಡು ಸಂಸ್ಥೆಗಳೂ ಮಾಡಿರತಕ್ಕ ಅನ್ಯಾಯ, ಅನೀತಿ, ಏನು ಎನ್ನುವುದು ವ್ಯಕ್ತವಾಗುತ್ತದೆ. ಇವತ್ತು ಅವರು ಮಾಡಿರತಕ್ಕ ಪಾಪಕ್ಕೆ ನಮ್ಮನ್ನು ಹೊಣೆ ಮಾಡಬೇಕು, ನಮ್ಮನ್ನು ಗುರಿಮಾಡಬೇಕು ಎಂದು ಈ ಮಸೂದೆಯನ್ನು ತಂದಿದ್ದೀರಾ? ಇದು ಸಮಾಜದಲ್ಲಿ ಗೌರವವನ್ನು ತರತಕ್ಕುದಲ್ಲ ಎಂದು ನೊಂದ ಮನಸ್ಸಿನಿಂದ ಹೇಳಬೇಕಾಗಿದೆ.

ಈ ಮಸೂದೆಗೆ ಸಭೆ ತನ್ನ ಸಮ್ಮತಿಯನ್ನು ಕೊಡುವ ಮುಖಾಂತರ ಯಾವ ಕೋರ್ಟಿನಲ್ಲಿಯೂ ಈಗ ಆಗಿರತಕ್ಕ ಅನ್ಯಾಯಗಳನ್ನು ಪ್ರಶ್ನೆ ಮಾಡುವುದಕ್ಕೆ ಅವಕಾಶವಿಲ್ಲ ಎನ್ನುವ ಒಂದು ಕಾಲಂ ಸೂಚನೆ ಮಾಡಿದ್ದಾರೆ. ಇದು ನನಗೆ ಅರ್ಥವಾಗುವುದಿಲ್ಲ. ನಾನು ಒಬ್ಬ ನ್ಯಾಯವಾದಿಯಲ್ಲ ಅಥವಾ ನನಗೆ ಲೀಗಲ್ ಆಸ್ಪೆಕ್ಟ್ ಗೊತ್ತಿಲ್ಲ. ಎಷ್ಟರಮಟ್ಟಿಗೆ ಈ ಒಂದು ವಿಧಿಗೆ ಈ ಸಭೆ ತನ್ನ ಸಮ್ಮತಿಯನ್ನು ಕೊಡಬಹುದು, ಅದರ ಮೆರಿಟ್ ಏನಿದೆ, ಅಂಥ ಕಲಂ ಹಾಕುವುದಕ್ಕೆ ಅಧಿಕಾರವಿದೆಯೋ ಇಲ್ಲವೋ ಎನ್ನುವ ಸಂಶಯ ಬರುತ್ತದೆ. ಯಾರಾದರೂ ಇದರ ಮೇಲೆ ಹೈಕೋರ್ಟಿಗೆ ಹೋದರೆ ವಿಧಾನ ಸಭೆ ತನ್ನ ಸಮ್ಮತಿಯನ್ನು ಕೊಟ್ಟಿದೆ ಎಂದು ಈ ವಿಧೇಯಕಕ್ಕೆ ಮೆರಿಟ್ ಎಲ್ಲಿಯವರೆಗೆ ಇದೆ ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಈ ಕಲಂನಲ್ಲಿ ಸೂಚಿಸಿರುವುದನ್ನು ನ್ಯಾಯತಜ್ಞರು ವಿಮರ್ಶೆ ಮಾಡಬೇಕಾದುದು ಬಹಳ ಅಗತ್ಯವೆಂದು ಹೇಳಿ ನನಗೆ ಉಂಟಾದ ಸಂಶಯವನ್ನು ಸಭೆಗೆ ತಿಳಿಸಿದ್ದೇನೆ.

ಮಾನ್ಯ ಮಂತ್ರಿಗಳು ಸಭೆಯಲ್ಲಿ ಈಗ ಇಲ್ಲ. ಸರ್ಕಾರದ ಪತಿಯಿಂದ ಜಂಟಿ ಜವಾಬ್ದಾರಿಯನ್ನು ಹೊಂದಿರತಕ್ಕ ಹಿರಿಯರಾದ ಶ್ರೀಮತಿ ಯಶೋಧರಮ್ಮ ಅವರು ಇಲ್ಲದ್ದಾರೆ. ಡಿವಿಜನಲ್ ಲೇಬರ್ ರಿಕ್ರೂಟ್‌ಮೆಂಟ್ ಕಮಿಟಿ ಮತ್ತು ಸ್ಟೇಟ್ ಲೇಬರ್ ರಿಕ್ರೂಟ್‌ಮೆಂಟ್ ಕಮಿಟಿಗಳಿಂದ ಆಗಿರುವ ಅನ್ಯಾಯದಿಂದ ಯೂನಿಟ್ ಆಫೀಸುಗಳಿಂದ ಹೊರದೂಡಲ್ಪಟ್ಟಿರುವ ಅಧಿಕಾರಿಗಳು ಯಾರಿದ್ದಾರೆ ಅವರು 8 9 ವರ್ಷ ಸರ್ವಿಸ್ ಮಾಡಿ ಆರೇಳು ಇನ್‌ಕ್ರಿಮೆಂಟುಗಳನ್ನು ಕೂಡ ಮಾಡಿದ್ದಾರೆ. ಇಂಥ ಮೂರನೆಯ ದರ್ಜೆ ಅಧಿಕಾರಿಗಳಿಗೆ ಬೇಗ ನ್ಯಾಯ ದೊರಕಿಸಿಕೊಡುವುದಕ್ಕೆ ಸರ್ಕಾರ ಗಮನ ಕೊಡಬೇಕೆಂದು ತಿಳಿಸಿ ಈ ಮಸೂದೆಯನ್ನು ವಿರೋಧಿಸುತ್ತೇನೆ.

† ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಗೋಪಾಲ ಗೌಡರು ಸಭೆಯಲ್ಲಿ ಮಂಡಿಸಿರತಕ್ಕ ನಿರ್ಣಯವನ್ನು ನಾನು ಸಮರ್ಥನೆ ಮಾಡುತ್ತ ನಾಲ್ಕು ಮಾತನ್ನು ಹೇಳಬೇಕೆಂದು ಬಯಸುತ್ತೇನೆ, ಸ್ವಾಮಿ.

ಇವತ್ತಿನ ದಿವಸ ಈ ಸಭೆಯ ಮುಂದೆ ಇರತಕ್ಕ ಆರ್ಡಿನೆನ್ಸನ್ನು ರಿಪೀಲ್ ಮಾಡಿ ಕಾನೂನು ಮಾಡಬೇಕು ಎಂದು ಬಂದಿರುವ ಮಸೂದೆ ಸರ್ಕಾರ ಹೇಳುವ ರೀತಿಯಲ್ಲಿ ಮೇಲ್ನೋಟಕ್ಕೆ ಸಮರ್ಥನೀಯವಾಗಿ ಕಂಡರೂ ಕೂಡ ಅದರಿಂದ ಬಹಳ ಜನಗಳಿಗೆ ತೊಂದರೆಯುಂಟಾಗುತ್ತದೆ. ಇದನ್ನು ಯಾವ ಉದ್ದೇಶದಿಂದ ತರಲಾಗಿದೆ ಎನ್ನುವುದು ಮುಖ್ಯ. ರಾಜ್ಯಪಾಲರಿಗೆ ರಾಜ್ಯಾಂಗದ 213ನೆಯ ವಿಧಿ ಪ್ರಕಾರ ಆರ್ಡಿನೆನ್ಸ್ ಹೊರಡಿಸತಕ್ಕ ಅಧಿಕಾರವಿದೆ. 24-9-65 ರಲ್ಲಿ ಈ ಆರ್ಡಿನೆನ್ಸ್ ಹೊರಗೆ

ಬಂದಿವೆ. ವಿಧಾನ ಸಭೆ ಇಲ್ಲದೆ ಇರತಕ್ಕ ಕಾಲದಲ್ಲಿ, ವಿಧಾನ ಸಭೆ ಕೊಡಲು ಸಾಧ್ಯವಾಗದೆ ಇರತಕ್ಕ ಪರಿಸ್ಥಿತಿಯಲ್ಲಿ ಬಹಳ ಅವಶ್ಯಕತೆ ಏನಾದರೂ ಇದ್ದರೆ, ಅಂಥ ಒಂದು ತೀವ್ರತೆಯ ಪರಿಸ್ಥಿತಿ ಇದ್ದ ಪಕ್ಷದಲ್ಲಿ 213ನೆ ವಿಧಿಯ ಪ್ರಕಾರ ರಾಜ್ಯಪಾಲರು ಒಂದು ಆಜ್ಞೆಯನ್ನು ಹೊರಡಿಸತಕ್ಕ ಅಧಿಕಾರ ವನ್ನು ಹೊಂದಿದ್ದಾರೆ. ನಮ್ಮ ವಿಧಾನ ಸಭೆಯು ಪ್ರೋರೋಗ್ ಆದದ್ದು ಸೆಪ್ಟೆಂಬರ್ 11ನೆ ತಾರೀಖು. ಈ ಆರ್ಡಿನೆನ್ಸ್ ಬಂದಿರುವುದು 24ನೆ ತಾರೀಖು. ಅದರಲ್ಲಿ ಹೇಳಿರತಕ್ಕ ಕಾರಣ ಆ ವಿಧಿಯನ್ನು ಸಮರ್ಥನೆ ಮಾಡುವುದಕ್ಕೆ ಎಷ್ಟು ಕಾರಣ ಬೇಕೋ ಅಷ್ಟನ್ನು ಮಾತ್ರ ಕೊಟ್ಟಿದ್ದಾರೆಯೇ ವಿನಾ ವಾಸ್ತವಾಂಶಗಳನ್ನು ಸಭೆಯ ಮುಂದೆ ಸರ್ಕಾರದವರು ಇಟ್ಟಿಲ್ಲ ಎಂದು ನನ್ನ ಭಾವನೆ.

ಈ ಆರ್ಡಿನೆನ್ಸ್‌ನಲ್ಲಿ ಹೇಳಿರತಕ್ಕ ಕಾರಣ ಡಿವಿಜನ್ ಲೆವಲ್ ರಿಕ್ರೂಟ್‌ಮೆಂಟ್ ಕಮಿಟಿ ಮತ್ತು ಸ್ಟೇಟ್ ಲೆವಲ್ ರಿಕ್ರೂಟ್‌ಮೆಂಟ್ ಕಮಿಟಿ ಇವುಗಳ ರಚನೆ, ಅದರಲ್ಲಿ ಕೆಲವು ತಪ್ಪುಗಳು ಮತ್ತು ಸಮಿತಿ ಅಭ್ಯರ್ಥಿಗಳನ್ನು ಆರಿಸುವಾಗ ಕೆಲವು ನ್ಯೂನತೆಗಳು ಕಂಡುಬಂದುದರಿಂದ ಹೈಕೋರ್ಟಿನ ವರು ಅದನ್ನು ಕಿತ್ತುಹಾಕಿದರು. ಆ ದೃಷ್ಟಿಯಿಂದ ಈ ಸಮಿತಿಗಳು ಆಯ್ಕೆ ಮಾಡಿರುವ ನೌಕರರಿಗೆ ಅನ್ಯಾಯವಾಗುತ್ತದೆ, ಸಾವಿರಾರು ಜನ ನೌಕರರನ್ನು ಬದುಕಿಸುವುದಕ್ಕೋಸ್ಕರ ಈ ಆರ್ಡಿನೆನ್ಸ್ ಹೊರಡಿಸಲಾಗಿದೆ ಎಂದು ಮಾತ್ರ ಅದರಲ್ಲಿ ಕೊಟ್ಟಿದೆ. ಏನೇ ಆಗಲಿ, ಒಂದು ರಾಜ್ಯದಲ್ಲಿರತಕ್ಕ ಮುಖ್ಯ ನ್ಯಾಯಾಲಯ ತೀರ್ಮಾನ ಕೊಟ್ಟಾಗ ಆ ತೀರ್ಮಾ ನಕ್ಕೆ ಎಲ್ಲರೂ ಬದ್ಧರಾಗಿರಬೇಕು. ಅಥವಾ ಇನ್ನಾವುದಾದರೂ ರೂಪದಲ್ಲಿ ಅನ್ಯಾಯವಾಗಿರತಕ್ಕ ವರಿಗೆ ನ್ಯಾಯವನ್ನು ಕಲ್ಪಿಸುವ ಕಾರ್ಯವನ್ನು ಸರ್ಕಾರ ಮಾಡಿಸಿದ್ದರೆ ಬಹಳ ಚೆನ್ನಾಗಿತ್ತು. ಸ್ಟೇಟ್ ಲೆವಲ್ ರಕ್ರೂಟ್‌ಮೆಂಟ್ ಕಮಿಟಿಯವರು ಮಾಡಿದಂಥ ಪಟ್ಟಿ ಪ್ರಕಾರ ಸಾವಿರಾರು ನೌಕರರಿಗೆ ಅನ್ಯಾಯ ವಾಯಿತು, ಕೆಲವರು ಟೆಂಪೊರರಿಯಾಗಿ ಕೆಲಸಮಾಡುತ್ತಿದ್ದವರಿಗೆ ಅನ್ಯಾಯವಾಯಿತು ಎಂದು ಸುಮಾರು 800 ರಿಟ್ ಅರ್ಜಿಗಳು ಈಗ ಹೈಕೋರ್ಟಿನಲ್ಲಿವೆ. ಸೆಕ್ರೆಟೇರಿಯಟ್ ನಲ್ಲಿಯೇ ಕೆಲಸಮಾಡುವ ನೌಕರರು 4-5-6 ವರ್ಷಗಳು ಸರ್ವಿಸ್ ಮಾಡಿದಂಥ ಜನ ಅದ ರಲ್ಲೂ ಎಷ್ಟೋ ವರ್ಷಗಳು ಇನ್‌ಕ್ರಿಮೆಂಟ್ ಪಡೆದ ಜನ—ಇಂತಹವರಿಗೆ ಇದರಿಂದ ತೊಂದರೆಯಾಗಿದೆ. ಆ 800 ಜನ ನೌಕರರು ಹಾಕಿದಂತಹ ಅರ್ಜಿಗಳು ಇನ್ನೂ ಹೈಕೋರ್ಟಿನಲ್ಲಿವೆ. ಆದರೆ ಇಷ್ಟು 800 ಜನರಿಗೆ ಅನ್ಯಾಯವಾಗಿರತಕ್ಕದ್ದನ್ನು ಸರ್ಕಾರದವರು ಈ ಸಭೆಯ ಮುಂದೆ ಹೇಳಲಿಲ್ಲ. ಸ್ಟೇಟ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿಗಳು ಮತ್ತು ಡಿವಿಜನಲ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿಗಳು 1962ನೇ ಇಸವಿಯಲ್ಲಿ ಅಸ್ತಿತ್ವಕ್ಕೆ ಬಂದಾಗ ಎಷ್ಟು ಜನ ಕೆಲಸಮಾಡುತ್ತಾ ಇದ್ದರು, ಈಗ ಎಷ್ಟು ಜನ ಕೆಲಸದಲ್ಲಿದ್ದಾರೆ, ಅವರ ಸರ್ವಿಸ್ ಎಷ್ಟಾಗಿತ್ತು—ಎಂಬೀವಿವರಗಳನ್ನು ಸರ್ಕಾರದವರು ಈ ಸಭೆಯಮುಂದೆ ಇಟ್ಟಿಲ್ಲ ಆ ಕಮಿಟಿಗಳು ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚಿತವಾಗಿ ಎಷ್ಟು ನೌಕರರು ಇದ್ದರು ಎಂಬುದನ್ನೂ ಕೂಡ ಇವರು ತಿಳಿಸಿಲ್ಲ. ಆ ರೀತಿ ತಿಳಿಸಿದ್ದರೆ ಅದರಲ್ಲಿ ಯಾವ ರೀತಿಯಲ್ಲಿ ನ್ಯಾಯ ದೊರಕಿಸಿದ್ದಾರೆಂಬುದನ್ನು ತಿಳಿದು ಈ ಆರ್ಡಿನೆನ್ಸನ್ನು ಒಪ್ಪಬೇಕೋ ಬೇಡವೋ ಎಂದು ಹೇಳುತ್ತಿದ್ದೆವು. ಈಗ ಒಂದು ವೇಳೆ ಇದನ್ನು ಒಪ್ಪಿ ಜಾರಿಗೆ ಕೊಟ್ಟ ಪಕ್ಷದಲ್ಲಿ ಸಾವಿರಾರು ನೌಕರರು ಬೀದಿಗೆ ಹೋಗುವ ಪರಿಸ್ಥಿತಿ ಬಂದಿದೆ. ನಾನು ಈ ಸರ್ಕಾರಿ ನೌಕರಿಗೆ ಬರತಕ್ಕ ಜನರಿಗೆ ಅಷ್ಟು ಪ್ರೋತ್ಸಾಹ ಕೊಡುವ ಮನುಷ್ಯನಲ್ಲ. ಬೇರೆ ಏನೂ ಕೆಲಸಮಾಡುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕ ಜನ ಕೂಡ ಕೇವಲ ಈ 100-150 ರೂಪಾಯಿಗಳ ಸಂಬಳವನ್ನು ತೆಗೆದುಕೊಂಡು ಜೀವನಮಾಡು ವುದಕ್ಕೆ ಸಾಧ್ಯವಿಲ್ಲ ವೆಂದು ನನ್ನ ಅಭಿಪ್ರಾಯ. ಅವರು ಅಂತಹ ಪರಿಸ್ಥಿತಿಯಲ್ಲಿರುತ್ತಾರೆ. ಸಾವಿ ರಾರು ಜನ ನೌಕರರು 6-7 ವರ್ಷಗಳ ಕಾಲ ಸರ್ವಿಸ್‌ನಲ್ಲಿದ್ದು ಇನ್‌ಕ್ರಿಮೆಂಟ್ ತೆಗೆದುಕೊಂಡ ವರು ಇದೇ ಹೈಕೋರ್ಟಿನಲ್ಲಿ ರಿಟ್ ಹೋಗಿದ್ದಾರೆ. ಸುಮಾರು 800 ಅರ್ಜಿಗಳು ಆ ಕೋರ್ಟಿನಲ್ಲಿ ದಾಖಲು ಆಗಿದ್ದರೂ ರಾಜ್ಯಾದ್ಯಂತ ಎಷ್ಟು ಜನಗಳಿಗೆ ತೊಂದರೆಯಾಗುತ್ತದೆಂಬುದನ್ನು ಸರ್ಕಾರ ದವರು ಈ ಸಭೆಯಮುಂದೆ ಇಟ್ಟಿಲ್ಲ. ಈ ಡಿವಿಜನಲ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿ ಮತ್ತು ಸ್ಟೇಟ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿಯವರು ಆಯ್ಕೆಮಾಡಿದಂತಹ ಜನಗಳಲ್ಲಿ ಎಷ್ಟು ಜನ ಕೆಲಸ ಗಳಿಗೆ ಹಾಜರಾಗಿದ್ದಾರೆ? ಹಾಜರಾಗಿರುವವರು ಬಹಳ ಕಡಿಮೆ ಜನ. ಕೆಲಸದಲ್ಲಿದ್ದವರಿಗೆ ಇದ ರಿಂದ ಆಗಿರುವ ಅನ್ಯಾಯಗಳನ್ನು ನೋಡಬೇಕಾಗಿದೆ, ಮನೆಗೆ ಹೋಗುವವರ ಸ್ಥಿತಿಯನ್ನು ನೋಡ ಬೇಕಾಗಿದೆ. ಸರ್ಕಾರದವರು ತಾವುಮಾಡಿದ ತಪ್ಪನ್ನು ಶ್ರೀಮಾನ್ ಗೋಪಾಲಗೌಡರು ಹೇಳಿದ ಹಾಗೆ ಒಪ್ಪಿಕೊಳ್ಳಬೇಕು. ಇವರು ರಾಜಮಾರ್ಗವನ್ನು ಬಿಟ್ಟು ಹಿಂಬಡಿಯಲ್ಲಿ ಬಂದಾಗ ಅವರು ಮಾಡಿದ್ದನ್ನು ಸಮರ್ಥನೆಮಾಡಿಕೊಳ್ಳುವುದು ಅನುಚಿತವಾದ್ದು. ಆದ್ದರಿಂದ ಇಂತಹ ಆರ್ಡಿನೆನ್ಸನ್ನು ಈಗ ತಂದಿರುವುದು ಅಷ್ಟು ಯೋಗ್ಯವಾದ್ದಲ್ಲ, ಮತ್ತು ಅಷ್ಟು ಗೌರವವಾದುದಲ್ಲ. ನಮ್ಮಲ್ಲಿ ಐ.ಸಿ.ಎಸ್. ಆಗಿರತಕ್ಕ ಒಬ್ಬ ಚೀಫ್ ಸೆಕ್ರಟರಿಗಳಿದ್ದಾರೆ. ಲಾ ಡಿಪಾರ್ಟಮೆಂಟ್ ಬೇರೆ ಇದೆ. ಎಷ್ಟೋ ಕಮಿಟಿಗಳು ಆಗಿವೆ. ಇವರ್‍ಯಾರೂ ಇದನ್ನೆಲ್ಲ ಯೋಚನೆಮಾಡಲಿಲ್ಲವೇ? ಇಂತಹ ಒಂದು

(ಶ್ರೀ ಕೆ. ಎಚ್. ರಂಗನಾಥ್)

ಸಣ್ಣ ವಿಚಾರವನ್ನು ಬಗೆಹರಿಸಲಾರದ ಜನ ನಿಜವಾಗಿ ಈಗಿನ ಹೆಚು ಜವಾಬ್ದಾರಿಯನ್ನು ಹೊರಲಿಕ್ಕೆ ಸಾಧ್ಯವೇ? ಇನ್ನೂ ಅಂತರ ರಾಜ್ಯ ಸೀನಿಯಾರಿಟಿ ಪಟ್ಟಿಯೂ ಸಹ ತಯಾರಾಗಿಲ್ಲ. ಫಾರೆಸ್ಟ್ ಮತ್ತು ಅಗ್ರಿಕಲ್‌ಚರಲ್ ಇಲಾಖೆಯಲ್ಲಿರತಕ್ಕ ಅಧಿಕಾರಿಗಳೂ ಸಹ ಈ ವಿಚಾರದ ಬಗ್ಗೆ ಕೋರ್ಟಿಗೆ ಹೋಗತಕ್ಕದ್ದನ್ನು ನಾನು ಒಪ್ಪುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನೌಕರರು ತ್ಯಾಗವಾಡುವುದನ್ನು ನಾನು ಒಪ್ಪುತ್ತೇನೆ. ಆದರೆ ಅವರು ಕೋರ್ಟಿಗೆ ಹೋಗುವ ರೀತಿಯಲ್ಲಿಲ್ಲ. ಏನಾದರೂ ತಪ್ಪು ಮಾಡುವ ಅಧಿಕಾರಿಗಳಿದ್ದರೆ ಅಂತಹವರಿಗೆ ಆ ಮಾತನ್ನು ಹೇಳಬೇಕಾಗುತ್ತದೆ. ಯಾವಾಗಲೂ ನೌಕರರು ಅವರಿಗೆ ಅನ್ಯಾಯವಾಗಿದ್ದರೆ ಕೋರ್ಟಿಗೆ ಹೋಗುತ್ತಾರೆಯೇ ಹೊರ್ತು ಸಂಬಳ ಜಾಸ್ತಿ ಬೇಕೆಂದು ಹೋಗುವುದಿಲ್ಲ. ಈಗ ಅಂಡರ್ ಸೆಕ್ರೆಟರಿ, ಡೆಪ್ಯುಟಿ ಸೆಕ್ರೆಟರಿ, ಸೆಕ್ರೆಟರಿ, ಮತ್ತು ಚೀಫ್ ಸೆಕ್ರೆಟರಿ, ಅಲ್ಲದೆ ಲಾ ಡಿಪಾರ್ಟ್‌ಮೆಂಟ್ ಬೇರೆ ಇದೆ. ಇಷ್ಟು ಇದ್ದರೂ ನಮ್ಮ ರಾಜ್ಯದಲ್ಲಿ ಡೆವಲಪ್‌ಮೆಂಟ್ ವರ್ಕ್ಸ್‌ನಿಂದ ಹೆಚ್ಚಿಗೆ ಜನರನ್ನು ಸರ್ಕಾರಿ ನೌಕರಿಗೆ ತೆಗೆದುಕೊಳ್ಳುವುದು, ಸೀನಿಯಾರಿಟಿ ಕೊಡುವುದು, ಪ್ರೊಮೋಷನ್ ಕೊಡುವುದು, ಹೀಗೆಲ್ಲಾ ಇದರಲ್ಲಿ ತೆಗೆದುಕೊಳ್ಳುತ್ತಾರೆ. ಆದರೂ ಡೆವಲಪ್‌ಮೆಂಟ್ ಆಕ್ಟಿವಿಟೀಸಿಗೆ ಹೆಚ್ಚು ಕಾಲವನ್ನು ಇವರು ವ್ಯಯಮಾಡುತ್ತಿಲ್ಲ. ಆದರೆ ಇವರು ಡಿವಿಷನಲ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿ ಮತ್ತು ಸ್ಟೇಟ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿಗಳಿಂದ ಸೆಲೆಕ್ಟ್ ಆದವರು ಎಷ್ಟು ಜನ ಈ ದಿವಸ ಕೆಲಸವಾಡುತ್ತಿದ್ದಾರೆಂಬ ಒಂದು ಪಟ್ಟಿಯನ್ನು ನಮ್ಮ ಮುಂದೆ ಇಟ್ಟಿಲ್ಲ. ಟೆಂಪೊರರಿಯಾಗಿ ಕೆಲಸಮಾಡುವವರಲ್ಲಿ ಇದರಿಂದ ಎಷ್ಟು ಜನ ಮನೆಗೆ ಹೋಗುತ್ತಾರೆ, ಅವರು ಒಬ್ಬೊಬ್ಬರು ಎಷ್ಟು ಮ್ಯಾಗ್ಜಿಮಮ್ ಸರ್ವಿಸ್ ಮಾಡಿದ್ದಾರೆ, ಎಷ್ಟು ಜನ ಇನ್‌ಕ್ರಿಮೆಂಟ್ ತೆಗೆದುಕೊಂಡಿದ್ದಾರೆ, ಇನ್ನೂ ತೆಗೆದುಕೊಂಡಿಲ್ಲ ಮುಂತಾದ ವಿವರಗಳನ್ನೆಲ್ಲಾ ಈ ಸರ್ಕಾರದವರು ಈ ಸಭೆಯ ಮುಂದೆ ಇಡಬೇಕಾಗಿತ್ತು. ಇವರು ಆ ರೀತಿ ಇದುವರೆಗೂ ಇಟ್ಟಿಲ್ಲ. ಆದ್ದರಿಂದಲೇ ಆಡಳಿತವರ್ಗಕ್ಕೆ ಸರ್ಕಾರದ ಮೇಲೆ ಹಾಹಾಕಾರ ಇದೆ. ಅದಲ್ಲದೆ ನಾನ್–ಗೆಜೆಟೆಡ್ ನೌಕರರ ಸಂಘದ ಪ್ರೆಸಿಡೆಂಟ್ ಅವರನ್ನು ಬೇರೆ ಕೆಲಸದಿಂದ ತೆಗೆದು ಅದು ಒಂದು ಕಡೆ ಗಲಾಟೆ ಈಗಾಗಲೇ ಇದೆ. 800 ಜನ ನೌಕರರು ವಿಧಾನ ಸೌಧದಲ್ಲಿ ಕೆಲಸಮಾಡುತ್ತಿದ್ದವರೇ ರಿಟ್ ಅರ್ಜಿಯನ್ನು ಹೈಕೋರ್ಟಿನಲ್ಲಿ ಸಲ್ಲಿಸಿ ಒಂದು ರೀತಿಯ ಹಾಹಾಕಾರವನ್ನು ಸರ್ಕಾರದವೇಲೆ ಎಬ್ಬಿಸಿರುವುದು ಇನ್ನೊಂದು ಕಡೆ ಗಲಾಟೆ. ಈ ರೀತಿಯಾದ ಪರಿಸ್ಥಿತಿಯನ್ನು ಸರ್ಕಾರದವರು ಕಲ್ಪನೆಮಾಡಿದರೆ ನಾವೆಲ್ಲರೂ ಇಲ್ಲಿ ಇದ್ದುಕೊಂಡು ಈ ಸಭೆ ಒಂದು ಜವಾಬ್ದಾರಿಯಲ್ಲಿ ನಡೆದ ಹಾಗೆ ಆಗುತ್ತದೆಯೇ ಎಂದು ನಾನು ಪ್ರಶ್ನೆಮಾಡುತ್ತೇನೆ. ಈ ವಿಚಾರದ ಬಗ್ಗೆ ಎಲ್ಲ ಮಾನ್ಯ ಸದಸ್ಯರೂ ಬಹಳವಾಗಿ ಆಲೋಚನೆಮಾಡಬೇಕೆಂದು ನಾನು ಕಳಕಳಿಯಿಂದ ಕೇಳುತ್ತೇನೆ. ಮಾನವೀಯತೆಯ ದೃಷ್ಟಿಯಿಂದ ನಾವು ಇದನ್ನು ವಿಚಾರಮಾಡಬೇಕಾಗಿದೆ. ಯಾವನೋ ಒಬ್ಬ ನೌಕರನ ಬಗ್ಗೆ ಮಾತನಾಡುವುದೇನು ಎಂಬ ಭಾವನೆ ಯಾರಿಗೂ ಬರಕೂಡದು ಎಂದು ನಾನು ಪ್ರಾರ್ಥಿಸುತ್ತೇನೆ. ವಿಧಾನ ಸೌಧದಲ್ಲಿ ಕೆಲಸ ಮಾಡಿದಂತಹ ಜನ, ಅದರಲ್ಲೂ ಈ ಆರ್ಡಿನೆನ್ಸ್‌ನಿಂದ ಮನೆಗೆ ಹೋದ ಜನ ಹೈಕೋರ್ಟಿಗೆ ಹೋದರೆ ಹೇಗೆ? ರಾಜ್ಯಾದ್ಯಂತ ಅಂತಹ ಜನ ಎಷ್ಟು ಇದ್ದಾರೆಂಬ ಬಗ್ಗೆ ಈ ಸಭೆಯ ಮುಂದೆ ಸರಿಯಾದ ಮಾಹಿತಿ ಇಲ್ಲ. ಆದ್ದರಿಂದ ಇದನ್ನು ಅಷ್ಟು ಅವಸರದಲ್ಲಿ ಅಂಗೀಕಾರ ಮಾಡತಕ್ಕದ್ದು ಸರಿಯಲ್ಲ. ರಾಜ್ಯಾಂಗ ವಿಧಿ ಪ್ರಕಾರ ಆರು ವಾರಗಳಿಗಿಂತ ಹೆಚ್ಚಿಗೆ ಇದು ಇರುವುದಕ್ಕೆ ಸಾಧ್ಯವಿಲ್ಲ. ಆದರೆ ರಾಜ್ಯಾಂಗ ವಿಧಿಗಳನ್ನು ಸ್ಯಾಟಿಸ್‌ಫೈ ಮಾಡುವುದಕ್ಕೋಸ್ಕರ ಈ ಆರ್ಡಿನೆನ್ಸನ್ನು ಪಾಸ್ ಮಾಡಬೇಕಾಗದೆಯೇ ಹೊರ್ತು ಮತ್ತೇನೂ ಇಲ್ಲ. ಮುಖ್ಯವಾಗಿ ನೌಕರರಿಗೆ ಉಪಯೋಗ ಉಂಟುಮಾಡಲಿಕ್ಕೆ ಇದನ್ನು ತರಬೇಕಾಗಿದೆಯೇ ಎನ್ನುವುದನ್ನು ನಾವು ನೋಡಬೇಕು. ನಮ್ಮ ಚೀಫ್ ಸೆಕ್ರೆಟರಿಯವರು ಏನೂ ಕೆಲಸವಾಡುತ್ತಿಲ್ಲವೆಂದು ಹೇಳಿದರೇನೂ ತಪ್ಪಾಗುವುದಿಲ್ಲ, ಅಂಡರ್ ಸೆಕ್ರೆಟರಿ ಮತ್ತು ಡೆಪ್ಯುಟಿ ಸೆಕ್ರೆಟರಿ, ಜನರಲ್ ಅಡ್ಮಿನಿಸ್ಟ್ರೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಯಾರೂ ಏನೂ ಕೆಲಸ ಮಾಡುತ್ತಿಲ್ಲ. ಇವತ್ತಿನ ದಿವಸ ಒಂದು ಪ್ರೊಮೋಷನ್ ಆಗಬೇಕಾದರೆ ಬಹಳ ನಿಧಾನವಾಗುತ್ತಿದೆ, ಒಂದು ವರ್ಗಾವಣೆಯಾಗಬೇಕಾದರೂ ಬೇಕಾದಷ್ಟು ಕಾಲವಿಳಂಬವಾಗುತ್ತದೆ. ಹೇಗಾದರೂ ಸುವರ್ಣ ಮೂಮೆಂಟ್ ಸ್ಟೇಜಿನಲ್ಲಿಯೇ ಎಷ್ಟೋ ವೇಳೆಯಾಗುತ್ತದೆ. 1956 ರಿಂದ 1965 ರವರೆಗೆ ಇನ್ನೂ ಇಂಟರ್ ಸ್ಟೇಟ್‌ಸೀನಿಯಾರಿಟಿ ಪ್ರಶ್ನೆಯನ್ನೇ ಇವರು ಫೈನಲೈಜ್ ಮಾಡಿಲ್ಲ. ಇದು ಯಾವ ಸರ್ಕಾರಕ್ಕೂ ಗೌರವ ತರತಕ್ಕ ಮಾರ್ಗವಲ್ಲ. ಇನ್ನೂ ಹೇಳುವುದಾದರೆ, ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನಲ್ಲಿ 1961ನೇ ಇಸವಿಯಲ್ಲಿ ಮಾಡಿದಂತಹ ಸೀನಿಯಾರಿಟಿ ಲಿಸ್ಟ್ ಇನ್ನೂ ಫೈನಲೈಜ್ ಆಗಿಲ್ಲ. ಅದೂ ಅಲ್ಲದೆ 1957ರಲ್ಲಿ ತಯಾರಾದ ಪಟ್ಟಿಯೂ ಇನ್ನೂ ಇದುವರೆಗೆ ಕಾರ್ಯರೂಪಕ್ಕೆ ಬರುತ್ತಾ ಇಲ್ಲ. ಮೊನ್ನೆಮೊನ್ನೆ ಕೇವಲ ಎರಡು ತಿಂಗಳುಗಳ ಒಳಗೆ ಅಗ್ರಿಕಲ್‌ಚರಲ್ ಅಡ್ಮಿನಿಸ್ಟ್ರೇಟರುಗಳ ಬಗ್ಗೆ ಒಂದು ಸೀನಿಯಾರಿಟಿ ಲಿಸ್ಟ್ ಫೈನಲೈಜ್ ಆದರೂ ಅದರಲ್ಲಿ ನಾನಾ ದೋಷಗಳು

ಕಂಡುಬರುತ್ತಾ ಇವೆ. ಯಾರ್ಯಾರು ಕೆಳದರ್ಜೆದಲ್ಲಿದ್ದಾರೋ ಅಂತಹವರಿಗೆ ಪ್ರೊಪ್ರೋಷನ್ ಕಾನೂನಿಗೆ ವಿರೋಧವಾಗಿ ಕೊಡುತ್ತಿದ್ದಾರೆ. ಇದರಿಂದ ಅವರು ಯಾರೂ ಸಮರ್ಪಕವಾಗಿ ಕೆಲಸ ಮಾಡುತ್ತಾ ಇಲ್ಲ. ಅಂತಹವರಿಗೆ ವಿಧಾನ ಸೌಧದಲ್ಲಿ ಕೆಲಸಗಳನ್ನು ಹೊಸದಾಗಿ ಕ್ರಿಯೇಟ್ ಮಾಡುತ್ತೇವೆಂದು ಹೇಳುತ್ತಾರೆ. ಇದರಿಂದ ಇವರೇ ಒಂದು ಕೆಟ್ಟ ಹವ್ಯಾಸವನ್ನುಂಟುಮಾಡುತ್ತಿದ್ದಾರೆ. ಒಟ್ಟಿನಲ್ಲಿ ಜಿ.ಎ.ಡಿ. ನಿಜವಾಗಿ ಏನೂ ಕೆಲಸಮಾಡುತ್ತಿಲ್ಲವೆಂದು ನಾನು ಬಹಳ ಕಳಕಳಿಯಿಂದ ಹೇಳುವ ಮಾತು. ಇದು ಈ ಸಭೆಗಾಗಲೀ ಅಥವಾ ರಾಜ್ಯಕ್ಕಾಗಲೀ ಗೌರವ ತರತಕ್ಕದ್ದಲ್ಲ. ಆದ್ದರಿಂದ ನಾನು ಸರ್ಕಾರದವರಿಗೆ ಹೇಳುವುದಿಷ್ಟೆ; ಕಾನೂನು ಪ್ರಕಾರ ಈ ಒಂದು ಆರ್ಡಿನೆನ್ಸ್ ಜಾರಿಗೆ ಕೊಡುವ ಮೊದಲೇ ಇನ್ನೊಂದು ಸಾರಿ ಈ ಅಸೆಂಬ್ಲಿ ಸೇರಿ ಆರು ವಾರಗಳೊಳಗೆ ಅಂದರೆ, ಈ ತಿಂಗಳು 11 ನೇ ತಾರೀಖಿನಿಂದ ಸುಮಾರು ಒಂದೂ ಒಂದೂವರೆ ತಿಂಗಳೊಳಗೆ ಈ ವಿಚಾರವನ್ನು ವಿಮರ್ಶೆಮಾಡುವುದಕ್ಕೆ ಕಾಲಾವಕಾಶವಿದೆ. ಇದಕ್ಕಾಗಿ ಅಸೆಂಬ್ಲಿ ಮತ್ತೆ ಒಂದು ದಿವಸ ಸೇರಬಹುದು. ಇದೂ ಅಲ್ಲದೆ ಇನ್ನೂ ಅನೇಕ ತೆರಿಗೆ ಮಸೂದೆಗಳು ಚರ್ಚೆಯಾಗಬೇಕಾಗಿವೆ. ಈಗ ಹಂಗಾಮಿಯಾಗಿ ಕೆಲಸಮಾಡುತ್ತಿದ್ದ ನೌಕರರು ರಾಜ್ಯಾದಂತ ಎಷ್ಟು ಜನ ನಾಲ್ಕಾರು ವರ್ಷಗಳ ಸರ್ವಿಸ್‌ಮಾಡಿ ಈ ಒಂದು ಆರ್ಡರ್ ನಿಂದ ಮನೆಗೆ ಹೋಗುತ್ತಿದ್ದಾರೋ ಅವರು ತಮ್ಮ ಹೆಂಡತಿ ಮಕ್ಕಳ ಗತಿಯೇನು ಎಂಬುದಾಗಿ ಈಗ ಹೇಳುತ್ತಿದ್ದಾರೆ.

ಈಗ ಸರ್ಕಾರಕ್ಕೆ ಕೆಲಸಕ್ಕೆ ಅರ್ಜಿಯನ್ನು ಹಾಕಿಕೊಳ್ಳಬೇಕಾದರೆ ಏನು ವಯೋಮಿತಿಯನ್ನು ಹಾಕಿದ್ದಾರೆಂದರೆ ಬ್ರಾಹ್ಮಣರಾದರೆ 25 ವರ್ಷಕ್ಕಿಂತ ಮೇಲ್ಪಟ್ಟು ಇರಬಾರದೆಂದೂ, ಹರಿಜನರು ಮತ್ತು ಇತರ ಹಿಂದುಳಿದ ಜನಾಂಗದವರಾದರೆ 28 ವರ್ಷಕ್ಕಿಂತ ಜಾಸ್ತಿ ಇರಬಾರದೆಂದೂ ಇದೆ. ಹೀಗಿರುವಾಗ ಈಗ ಹಂಗಾಮಿಯಾಗಿ ಕೆಲಸಮಾಡತಕ್ಕ ನೌಕರರು ಈಗಾಗಲೇ 5-6 ವರ್ಷಗಳ ಕಾಲ ಸರ್ಕಾರದಲ್ಲಿ ಕೆಲಸ ಮಾಡಿದ್ದಾರೆ. ಆ ಪೈಕಿ ಬಹಳ ಜನ ಈ ವಯೋಮಿತಿ ಮೀರಿರುವವರಾಗಿದ್ದಾರೆ. ಅಂಥವರ ಗತಿ ಏನು ಎಂದು ಸರ್ಕಾರದವರು ಯೋಚನೆ ಮಾಡಿದ್ದಾರೆಯೇ ? ಆದ್ದರಿಂದ ಈ ವಿಚಾರವನ್ನು ಸರ್ಕಾರದವರು ಕೂಲಂಕಷವಾಗಿ ಪರಿಶೀಲನೆ ಮಾಡಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಈಗ ಸರ್ಕಾರದವರು ಇದರಲ್ಲಿ ಹೇಳಿರತಕ್ಕ ಕಾರಣಗಳೇನಿವೆಯೋ ಅವು ಸಮಂಜಸವಾದ ಕಾರಣಗಳಲ್ಲ. ಇದಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳೇನಿವೆಯೋ ಅವುಗಳನ್ನು ಈ ಮಾನ್ಯ ಸಭೆಯ ಮುಂದೆ ಇಡಬೇಕು. ಈಗ ಹಂಗಾಮಿಯಾಗಿ ಕೆಲಸ ಮಾಡತಕ್ಕ ನೌಕರರುಗಳು ಎಷ್ಟು ಜನ ಮನೆಗೆ ಹೋಗುತ್ತಾರೆಯೋ ಅವರಿಗೆಲ್ಲಾ ಏನು ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರದವರು ಯೋಚನೆ ಮಾಡಿದ್ದಾರೆ ಎಂಬುದನ್ನು ಸಹ ಸರ್ಕಾರದವರು ತಿಳಿಸಬೇಕು. ಸ್ಟೇಟ್ ಲೆವೆಲ್ ರೆಕ್ರೂಟ್‌ಮೆಂಟ್ ಕಮಿಟಿಯವರು ಮತ್ತು ಡಿವಿಜನಲ್ ಲೆವೆಲ್ ರೆಕ್ರೂಟ್‌ಮೆಂಟ್ ಕಮಿಟಿಯವರು ಮಾಡಿರತಕ್ಕ ನೇಮಕಗಳ ಪಟ್ಟಿಯನ್ನು ಸರ್ಕಾರದವರು ಈ ಸಭೆಯಮುಂದೆ ಇಡಬೇಕೆಂದು ನಾನು ಹೇಳುತ್ತೇನೆ. ಈ ಹಿಂದೆ ನನಗೆ ಗೊತ್ತಿರುವಹಾಗೆ ರಾಜ್ಯಗಳ ಪುನರ್ವಿಂಗಡನೆಯಾದಮೇಲೆ 1-1-1961 ರಲ್ಲಿ ಹಂಗಾಮಿಯಾಗಿ ಕೆಲಸಮಾಡುತ್ತಿದ್ದಂತಹ ಸರ್ಕಾರಿ ನೌಕರರುಗಳನ್ನೆಲ್ಲಾ ಖಾಯಂ ಮಾಡಬೇಕೆಂದು ಸರ್ಕಾರದವರು ಒಂದು ಆರ್ಡರನ್ನು ಹೊರಡಿಸಿ ಸುಮಾರು ಸಾವಿರಾರು ಜನ ನೌಕರರನ್ನು ಖಾಯಂ ಮಾಡಿದ್ದಾರೆ. ಆ ನೌಕರರು ಯಾವ ಸ್ಟೇಟ್ ಲೆವೆಲ್ ರಿಕ್ರೂಟ್‌ಮೆಂಟ್ ಕಮಿಟಿಯವರ ಮುಂದಾಗಲೀ ಅಥವಾ ಡಿವಿಜನಲ್ ಲೆವೆಲ್ ರೆಕ್ರೂಟ್‌ಮೆಂಟ್ ಕಮಿಟಿಯವರ ಮುಂದಾಗಲೀ ಹೋಗಲಿಲ್ಲ. ಆದ್ದರಿಂದ ಅದರಂತೆಯೇ ಈಗಲೂ ಕೂಡ ಈಗ ಹಂಗಾಮಿಯಾಗಿ ಕೆಲಸ ಮಾಡತಕ್ಕ ನೌಕರರನ್ನು ಸಹ ಖಾಯಂ ಮಾಡಬೇಕು. ಈ ಒಂದು ಗಂಡಾಂತರ ಪರಿಸ್ಥಿತಿಯಲ್ಲಿ ಯಾರೋ ಕೆಲವು ಸಣ್ಣ ಸಣ್ಣ ಅಧಿಕಾರಿಗಳು ಮಾಡಿರತಕ್ಕ ತಪ್ಪಿಗೋಸ್ಕರವಾಗಿ ಈಗ ಹಂಗಾಮಿಯಾಗಿ ಕೆಲಸ ಮಾಡುತ್ತಿರುವ ನೌಕರರನ್ನು ಕೆಲಸದಿಂದ ತೆಗೆದುಹಾಕಿ ಅವರಿಗೆಲ್ಲಾ ತೊಂದರೆಯನ್ನುಂಟು ಮಾಡಿ ಅವರಲ್ಲಿ ಹಾಹಾಕಾರವನ್ನು ಹುಟ್ಟಿಸತಕ್ಕದ್ದು ಯಾರಿಗೂ ಸಹ ಮಾನ ಮರ್ಯಾದೆಯನ್ನು ತರತಕ್ಕ ಪರಿಸ್ಥಿತಿಯಲ್ಲಿ ಇಲ್ಲ. ಇದನ್ನು ಸರ್ಕಾರದವರು ಯೋಜನೆ ಮಾಡಬೇಕು. ಇದಕ್ಕೆ ಇನ್ನೂ ಆರು ವಾರಗಳ ಕಾಲ ಅವಕಾಶ ಇದೆ. ಅಷ್ಟರೊಳಗೆ ಟೈಮೇನೂ ಎಕ್ಸ್‌ಪೈರ್ ಆಗುವುದಿಲ್ಲ. ಆದ್ದರಿಂದ ಸರ್ಕಾರದವರು ಇದನ್ನು ಯೋಚನೆ ಮಾಡಿ ಆ ಹಂಗಾಮಿಯಾಗಿ ಕೆಲಸ ಮಾಡತಕ್ಕ ನೌಕರರು ಏನಿದ್ದಾರೆ ಅವರನ್ನು ಖಾಯಂ ಮಾಡುವ ವ್ಯವಸ್ಥೆಯನ್ನು ಮಾಡಿ ಈ ಸಭೆಯ ಗೌರವವನ್ನು ಉಳಿಸಬೇಕೆಂದು ಹೇಳಿ ಈ ದೃಷ್ಟಿಯಿಂದ ಈ ನಿರ್ಣಯವನ್ನು ಸಮರ್ಥನೆ ಮಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri D. DEVARAJ URS.—In order to facilitate the debate I should like to give some figures so that to that extent much of the criticism put forward on some imaginary information will not be there.

(SRI D. DEVARAJ URS)

Ever since the formation of these committees the total numbar of persons selected is 22,027 candidates.

State Level Recruitment	Committee	2,394
Divisional Level Recruitment	Bangalore	7,442
Do	Mysore	6,752
Do	Gulbarga	3,778
Do	Belgaum	1,661
	Total	22,027

Out of this, so far about 4,963 local candidates have bean working and roughly more than 50 per cent of these local candidates have been selected in the total number that has been selected.

[MR. SPEAKER in the Chair.]

†Sri G. V. GOWDA.—Sir, I am glad that at least now the Government has realised that they are required to safeguard the interests of employees whose employment, have been held illegal by the judicial pronouncement. Just now the Ho'nble Minister said that 4,963 candidates who were working as local candidates were also recruited by these committees. As a result of the judicial pronouncement they have to loose their job. At the outset I regret to point out why the Government did not take steps even as early as these various committees were constituted. Why were not rules framed and why the Governor was made to frame rules retrospectively. What promoted the Government in not being alert to see that every principle is applied and every procedure is followed. Because of the negligent attitude in this matter, especially in the constitution of committees it has been found there are defects in framing of rules and there has been inordinate delay and in giving them retrospective effect. We must take stringent steps to see how these things occurred and why these things were not done properly. The Hon'ble Minister must probe into this. It is said that several judgements of High Court and other courts are there pointing out several defects in the very constitution of these committees and framing of rules and following up principles and procedures.

Mr. SPEAKER.—The absence of one member in a big committee is not going to vitiate the proceeding. The High Court held that out of two nominated members if one is absent the proceedings are invalid. We have to respect it.

Sri G. V GOWDA —The Chairman of the Public Service Commission is the Chairman and the Head of the Department to which department recruitment has to be made is technically qualified to be present and there is no reason why he should be absent. Supposing he is

absent, the committee is not fully constitutad and there is no scope for the members to have a technical view of the matter. Take for example the Sericulture Department or the Fisheries Department. The Director of Fisheries or the Director of Sericulture must be there to guide the committee. In the absence of such experts it may not be possible for the Committee to have a correct view of things. That is the view taken by the High Court. When there is a particular person who could offer opinion and his opinion is not taken, in our opinion the selection is based, is vitiated. Therefore, the Government ought to have taken steps to see that people who are technically qualified should be present at the time of selection. On that lacuna several appointments have been struck off by the High Court. While the Government give reasons, why it was made retrospectively is another lacuna which has been held by the High Court as illegal. In fact, we have to sympathise with those people. Some of them have been sent home and the Government must do something to see that all these things are regularised and the emoluments paid to them. As I have said earlier, I have a doubt in my mind about the legality of the discussion we are having. I sympathise with the Government. But, I am interested to see that protection is given to the candidates who have been selected. At the same time, it is not the ordinance that is going to be validated. The Hon'ble Minister was pleased to say that if the Government does not intend to validate the ordinance, I am submitting, we have known for definiteness, that there is chance for challenging the issue of the ordinance by the Governor.

Mr. SPEAKER.—Competence of the Government to legislate is questioned?

Sri G. V. GOWDA.—The Governor is empowered to promulgate the ordinance, nobody can question that. What has been challenged now is the contents of the ordinance. How the Government could, by getting an ordinance, promulgate the validity of the illegal appointments.

Mr. SPEAKER.—The validity of that contention is yet to be decided.

Sri G. V. GOWDA.—True, Sir. Now, we are going to replace that ordinance. Even before the ordinance was issued, certain people challenged the validity of the appointments made. It was brought to the notice of the High Court and the High Court said, "it is infructuous and you withdraw your writ petitions." However, the High Court has been pleased to issue an interim stay. Are we within our bounds to discuss matters which are before the High Court?

Mr. SPEAKER.—Who says that we are prohibited from discussing?

Sri G. V. GOWDA.—When a matter is pending before a Court and which amounts to *sub judice*, that matter cannot be a matter for discussion. By our own rule, we do not discuss to cast aspersions upon the High Court or any Court before which a matter is pending. We do not want to influence consideration, because judiciary is an independent body.

Mr. SPEAKER.—Are we going to influence them by this.

Sri G. V. GOWDA.—My submission would be, whatever may be the merits or demerits, I am of opinion that the Government should have been more alert in not allowing such a situation to arise. Who are all these persons who are responsible for such things ? Because of somebody's negligence such a thing has come into existence and the Government and the employees are put to lot of hardship and trouble, and this is the thing that the Government must stop and probe into the matter to see that such things do not occur in future. I do not know whether this is going to stand the test of law. However, with the hope that the Legislature is competent to enact laws with retrospective effect we are doing it. In fact, when the legislation for setting up these bodies was considered before this House, some of us made representations that it is not wise to take away the powers that have been conferred on the Public Service Commission under the Constitution and entrust the same to some other bodies by enacting some laws. In spite of that, the Government did it. But, after having done it, the Government was not alert so that it could not have been questioned at any time for any lacuna that might be noticed later on. The Government cannot be excused for the mistake and hardship that it has given to so many employees.

ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಮಾನ್ಯ ಸಭಾಪತಿಯವರೆ, ನಮ್ಮ ಮುಂದೆ ಮಂಡಿಸಿರತಕ್ಕಂಥ Mysore State Civil Services Class III Posts Recruitment (Validation) ಬಿಲ್ಲನ್ನು ಸ್ವಾಗತಿಸುತ್ತಾ ಹಾಗೂ ಮಾನ್ಯ ಶ್ರೀಮಾನ್ ಗೋಪಾಲಗೌಡರು ಏಕ ಮುಖವಾಗಿ ಮಂಡಿಸಿರುವಂಥ ನಿರ್ಣಯವನ್ನು ವಿರೋಧಿಸುತ್ತಾ, ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲು ಇಚ್ಛೈಪಡುತ್ತೇನೆ.

ನಮ್ಮ ಸರಕಾರ ಹಿಂದಿನಿಂದಲೂ ಕೂಡ ನೌಕರರನ್ನು ಕೆಲಸಕ್ಕೆ ಸೇರಿಸಿಕೊಳ್ಳುವ ಪದ್ಧತಿ ಇದೆ. ಹಾಗೆ ಸೇರಿಸಿಕೊಳ್ಳುವಾಗ ಅವರನ್ನು ಮೊದಲು ಪಬ್ಲಿಕ್ ಸರ್ವೀಸ್ ಕಮಿಶನ್ ಮೂಲಕ ನೇಮಿಸಿ ಕೊಳ್ಳುತ್ತಿತ್ತು. ಪಬ್ಲಿಕ್ ಸರ್ವಿಸಸ್ ಕಮಿಶನ್ ಅವರನ್ನು ಕೆಲಸಕ್ಕೆ ಸೇರಿಸಿಕೊಳ್ಳುವಾಗ ಇಂಟರವ್ಯೂ ಮಾಡಬೇಕಾಗಿತ್ತು; ಅವರನ್ನೆಲ್ಲಾ ಸ್ಟೇಟ್ ಲೆವೆಲಿನಲ್ಲಿ ಇಂಟರವ್ಯೂ ಮಾಡುವುದು ಅಭ್ಯರ್ಥಿಗಳಿಗೆ ಕಷ್ಟವಾಗಿ ಕಂಡುಬಂದುದರಿಂದ, ಈ ಕಷ್ಟವನ್ನು ನಿವಾರಣೆ ಮಾಡಲು, ಈ ಪದ್ಧತಿ ಯನ್ನು ರದ್ದುಮಾಡಿ, ಜಿಲ್ಲಾ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ, ಡಿವಿಜನ್ ಮಟ್ಟದಲ್ಲಿ ರಿಕ್ರೂಟ್‌ಮೆಂಟ್ ಕಮಿಟಿಗಳನ್ನು ನೇಮಕ ಮಾಡಿದರು. ಉಪಾಧ್ಯಾಯರ ನೇಮಕದ ಬಗ್ಗೆಯೂ ಜಿಲ್ಲಾ ಮಟ್ಟದಲ್ಲಿ ಒಂದು ಸಮಿತಿಯನ್ನು ರಚಿಸಿದರು ; ಆ ಸಮಿತಿಯವರು ಜಿಲ್ಲಾ ಕೇಂದ್ರದಲ್ಲಿ ಪ್ರತಿಯೊಬ್ಬ ಅಭ್ಯರ್ಥಿ ಯನ್ನೂ, ಇಂಟರ್‌ವ್ಯೂ ಮಾಡಿ ಸೆಲೆಕ್ಟ್ ಮಾಡುತ್ತಿದ್ದಾರೆ. ಈ ಪದ್ಧತಿ ಬಹಳ ಸುಲಭವಾದ ಮತ್ತು ಬಹಳ ಉಪಯುಕ್ತವಾದ ಪದ್ಧತಿ. ಇದು ಮೆಚ್ಚಬೇಕಾದ ಬದಲಾವಣೆ.

ಹಾಗೆಯೇ, 1961ನೆ ಇಸವಿಯಿಂದಲೂ ಸರಕಾರದವರು ಬೇಕಾದಷ್ಟು ಜನರನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದಾರೆ. ಆಗಿನಿಂದಲೂ ಕೂಡ ಆ ವಿಧಾನದಲ್ಲಿ ಯಾವ ವಿಧವಾದ ಲೋಪದೋಷಗಳೂ ಕಂಡು ಬಂದಿರಲಿಲ್ಲ. ಈಚೆಗೆ ಕಾರಣಾಂತರದಿಂದ, ರಾಜ್ಯ ಮತ್ತು ಡಿವಿಜನಲ್ ಕಮಿಟಿಗಳು ಮಾಡಿದ ಕೆಲವು ರಿಕ್ರೂಟ್‌ಮೆಂಟುಗಳು ಕ್ರಮಬದ್ಧವಾಗಿಲ್ಲವೆಂದು ಹೈಕೋರ್ಟಿನವರು ಸೂಚಿಸಿರುವುದರಿಂದ, ಒಂದು ಸಮಸ್ಯೆ ಉದ್ಭವಿಸಿದೆ; ಇದನ್ನು ಸರ್ಕಾರದವರು ಯೋಚನೆ ಮಾಡಬೇಕಾಗಿದೆ ನಮ್ಮ ಸರಕಾರದಲ್ಲಿ ಲಾ ಇಲಾಖೆ ಅಂತ ಇದೆ. ಈ ಇಲಾಖೆಯವರು ಈ ಲೋಪದೋಷವನ್ನು ಮುಂಜಾ ಗ್ರತೆಯಿಂದ ನೋಡಿಕೊಳ್ಳಲಿಲ್ಲ. ಹೈಕೋರ್ಟಿನವರು ತಲೆ ಹಾಕಿದ ಮೇಲೆ, ಈ ರಿಕ್ರೂಟ್‌ಮೆಂಟು ಗಳನ್ನು ಕ್ರಮಬದ್ಧ ಮಾಡಬೇಕೆಂಬ ಪ್ರಶ್ನೆ ಹುಟ್ಟಿದ ಮೇಲೆ, ಸರಕಾರದವರು ಆ ನೇಮಕಗಳನ್ನು ವ್ಯಾಲಿಡೇಟ್ ಮಾಡಲು ಈ ಲೆಜಿಸ್ಲೇಶನ್ ತಂದಿರತಕ್ಕಂಥಾದ್ದು ಸಮಂಜಸವಾಗಿಯೆ ಇದೆ. ಈಗ ಈ ವಾಲಿಡೇಶನ್ ಬಿಲ್ ತರದೆ ಇದ್ದಿದ್ದರೆ ಬಹಳ ನೌಕರರಿಗೆ ಕಷ್ಟವಾಗುತ್ತಿತ್ತು. ಈಗತಾನೆ ಸರ್ಕಾರಧವರು ಉತ್ತರ ಕೊಡುತ್ತಾ ಹೇಳಿದರು. ಅದರ ಪ್ರಕಾರ ಈ ಕಮಿಟಿಗಳು ಸುಮಾರು 22

ಸಾವಿರ ಜನರನ್ನು ಸೆಲೆಕ್ಟ್ ಮಾಡಿಕೊಂಡಿದ್ದಾರೆ. ಅದರಲ್ಲಿ 4,963 ಲೋಕಲ್ ಕ್ಯಾಂಡಿಡೇಟುಗಳು; ಇವರಲ್ಲಿ ಶೇಕಡ 50ಕ್ಕಿಂತ ಹೆಚ್ಚು ಜನರನ್ನು ಸೆಲೆಕ್ಟ್ ಮಾಡಿಕೊಳ್ಳಲಾಗಿದೆ.

ಶ್ರೀಮಾನ್ ಗೋಪಾಲಗೌಡರು ಇಲ್ಲಿ ಅವರ ರೆಸಲ್ಯೂಷನ್ನನ್ನು ಮಂಡಿಸುತ್ತಾ ಹೇಳಿದರು ಈಗ ಹಿಂದೆ ಇಲ್ಲಿ ಹಂಗಾಮಿಯಾಗಿ ನೇಮಕವಾದ 4,963 ಜನ ನೇಮಕವಾದವರೆಲ್ಲಾ ಮನೆಗೆ ಹೋಗ ಬೇಕಾಗಿ ಬರುತ್ತದೆಂದು ಎಂದು ಮತ್ತು ಅವರಿಗೆ ಮುಂದೆ ಜೀವನ ಮಾಡುವುದಕ್ಕೆ ಬೇರೆ ಮಾರ್ಗವೇ ಇರುವುದಿಲ್ಲ ಎಂದು ಹೇಳಿದರು. ನಾನಾದರೂ ಭಾವಿಸುತ್ತೇನೆ ಈ ತರಾವಿನಂತೆ ಆಗಿದ್ದರೆ 1962ನೇ ಇಸವಿಯಿಂದ ಕೆಲಸ ಮಾಡಿದಂತಹ 22 ಸಾವಿರ ಜನ ಇವೊತ್ತು ಮನೆಗೆ ಹೋಗಬೇಕಾಗಿತ್ತು. 22 ಸಾವಿರ ಜನರ ಜೊತೆಗೆ ಅವರನ್ನು ಅನುಸರಿಸಿರುವ ಕುಟುಂಬ ವರ್ಗವೆಲ್ಲಾ ಅನಾನುಕೂಲಕ್ಕೆ ಗುರಿ ಯಾಗಬೇಕಾಗಿತ್ತು. ಆದರೆ ಅವರುಗಳೆಲ್ಲಾ ಡಿವಿಜನಲ್ ಲೆವೆಲ್ ರಿಕ್ರೂಟುಮೆಂಟು ಕಮಿಟಿ ಹಾಗೂ ಸ್ಟೇಟು ಲೆವಲ್ ರಿಕ್ರೂಟುಮೆಂಟು ಕಮಿಟಿಗಳಲ್ಲಿ ರಿಜಿಸ್ಟರು ಮಾಡಿಸಿಕೊಂಡಿದ್ದರಿಂದ ಹಿಂದೆ ಅವರು ಇದ್ದ ಕೆಲಸಗಳಿಗೆ ರಾಜೀನಾಮೆ ಕೊಟ್ಟು ಕಮಿಟಿಗಳ ಮೂಲಕ ಎಷ್ಟೋ ಕಡೆಗಳಲ್ಲಿ ಕೆಲಸಕ್ಕೆ ಸೇರಿದ್ದರಿಂದ ಬಹು ಜನಕ್ಕೆ ಅನುಕೂಲವಾಯಿತು. ಇಲ್ಲದೇ ಇದ್ದರೆ ಇದು ಒಂದು ದೊಡ್ಡ ಸಮಸ್ಯೆ ಯಾಗುತ್ತಿತ್ತು. ಇವೊತ್ತು ಅಂತಹ ಜನರೆಲ್ಲಾ ಕೆಲಸಗಳು ಸಿಕ್ಕಿ ಸುಖವಾಗಿರುವುದರಿಂದ ಅವರು ಗಳೂ ಕೂಡ ಸರಕಾರಕ್ಕೆ ಕೃತಜ್ಞರಾಗಿದ್ದಾರೆ. ನಾನೂ ಕೂಡ ಅವರ ಪರವಾಗಿ ಸರಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅಲ್ಲದೆ ಸರಕಾರದವರು ಇಂತಹ ವೇಲಿಡೇಷನ್ ಬಿಲ್ಲನ್ನು ಇಲ್ಲಿ ತಂದುದಕ್ಕಾಗಿ ಅವರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಶ್ರೀಮಾನ್ ಗೋಪಾಲ ಗೌಡರು ಇಲ್ಲಿ ಮಾತನಾಡುತ್ತಾ ಹೇಳಿದರು ಇದಕ್ಕೆ ಸರಕಾರದ ಅಸಡ್ಡೆಯೇ ಕಾರಣ ಎಂದು, ಹೇಳಿದರು ನನಗಾದರೂ ಅರ್ಥವಾಗುವುದು ಸರಕಾರದವರು 1962ರಲ್ಲಿ ಯಾವಾಗ ಕಮಿಟಿಗಳನ್ನು ನೇಮಕ ಮಾಡಲು ಮಾಡಿದರೋ ಅದರ ಮೂಲಕ ನೇಮಕಗಳಾದವು. ಆದರೆ ಈ ರೀತಿ ತೊಂದರೆಯಾಗ ಬಹುದೆಂದು ಯಾರು ಭಾವಿಸಿರಲಿಲ್ಲ. ಆದರೆ ಅದನ್ನು ಕ್ರಮಬದ್ಧವಾಗಿ ಮಾಡಬೇಕು ಇಲ್ಲದೇ ಹೋದರೆ ಮುಂದೆ ಹೈ ಕೋರ್ಟಿಗೆ ಹೋಗಲು ಅವಕಾಶವಿರಬಾರದು ಎಂದು ಇವೊತ್ತು ಇಂತಹ ಒಂದು ಬಿಲ್ಲನ್ನು ತಂದಿರುವುದು ಸಕಾಲವಾಗಿದೆ. ಹೀಗೆ ಸಕಾಲದಲ್ಲಿ ಸರಕಾರ ಇಂತಹ ಒಳ್ಳೆಯ ಕಾನೂ ನನ್ನು ತಂದುದಕ್ಕಾಗಿ ನಾನು ಧನ್ಯವಾದಗಳನ್ನು ಅವರಿಗೆ ಕೊಡಬೇಕು. ನಾನು ಮೊದಲೇ ತಿಳಿಸಿದ ಹಾಗೆ ಸರಕಾರದವರಲ್ಲಿರುವ ಲಾ ಇಲಾಖೆಯವರು ಮಾಡುತ್ತಿರುವ ಕೆಲಸಗಳು ಬಹಳ ನಿಧಾನವಾಗುತ್ತಿವೆ. ಅದರಿಂದಾಗಿ ನನಗೆ ತಿಳಿದಮಟ್ಟಿಗೆ ಎಷ್ಟೋ ರಿಟ್ ಪಿಟಿಷನ್ನುಗಳು ಇವೊತ್ತು ಹೈ ಕೋರ್ಟಿಗೆ ಹೋಗಿವೆ. ಇದರಿಂದ ಸರಕಾರದ ಲಾ ಇಲಾಖೆ ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿದೆ ಎನ್ನುವುದು ವ್ಯಕ್ತವಾಗುತ್ತದೆ. ಆದುದರಿಂದ ನಾನು ಸಲಹೆ ಮಾಡುವುದು ನಮ್ಮ ಲಾ ಇಲಾಖೆ ಯವರು ಇನ್ನೂ ಎಚ್ಚತ್ತು ವಿಚಕ್ಷಣೆಯಿಂದ ಹಾಗೂ ಚಾಕಚಕ್ಯತೆಯಿಂದ ಕೆಲಸಮಾಡಬೇಕೆಂದು ಸರಕಾರದವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. 1962ನೇ ಇಸವಿಯಿಂದ ಕೆಲಸಮಾಡಿದವರನ್ನು ತೆಗೆಯ ಬೇಕೆಂದು ಮಾಡಿದರೆ ಎಲ್ಲರೂ ನಿರ್ಗತಿಕರಾಗುತ್ತಾರೆಂದು ಅದಕ್ಕೆ ಸರಿಯಾದ ಬಿಲ್ಲುಗಳನ್ನು ಇಲ್ಲಿ ತರಬೇಕು ಎಂದು ಅದಕ್ಕೆ ಮುನ್ನ ಗವರ್ನರವರು ಒಂದು ಆರ್ಡಿನೆನ್ಸ್‌ನ್ನು ಸಕಾಲದಲ್ಲಿ ತಂದಿರುವುದು ಸ್ವಾಗತಾರ್ಹವಾದುದು. ಅದಕ್ಕಾಗಿ ಅವರಿಗೂ ನನ್ನ ಕೃತಜ್ಞತೆಗಳನ್ನರ್ಪಿಸಿ ಇಲ್ಲಿ ತಂದಿರುವ ಮಸೂದೆಯನ್ನು ಪೂರ್ಣವಾಗಿ ಸಮರ್ಥಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

†Sri ANNA RAO GANAMUKHI (Afzalpur).—Sir, I have a few remarks to make in this connection. It is a happy augury for the State that such a legislation is coming before this House. I am saying this because so far the Government had not cared to bring forward any piece of legislation relating to recruitment to the various posts in the Civil Services and they were availing of the proviso to article 309 of the Constitution and making laws under that proviso using the powers of the Governor for making such rules. It is clear from Article 309 that it is the State Legislature which is empowered to make laws regarding recruitment to the Civil Services and subject to that power the Governor has been empowered to make rules for recruitment to such posts. If the Government had brought forward such a legislation much before, then I think it would not have give rise to so many complaints and so many writs before the High Court. We know that

(SRI ANNA RAO GANAMUKHI)

defective rules of recruitment are framed by the Departments. I am referring not only to the general recruitment rules to the services but also to the rules of recruitment for the various departments. This is the reason why irregularities are being committed, defective rules are being framed and much scope is being given for grievances to the Civil Services of our State. Hence I would say that instead of bringing such a legislation to validate the irregularities committed by the Government, it is better that a comprehensive Bill relating to recruitment to the various services of the State is brought before the House so that such mistakes may not occur and Government may not be held responsible. We know under the Constitution the Governor has got law making power and that power is not absolute, but it is subject to the law to be made by the Legislature. Since the formation of this State such a law has not been brought forward and no law has been formulated for the recruitment to the Civil Services. Therefore, it is highly necessry that in order to avoid these irregularities we should bring forward a regular legislation before this House.

Even in this Bill, there are so many deeming provisions. We hav never come across such a small measure containing so many deeming measures. Because they have committed so many irregularities, in order to validate them we are made a party to save their irregularities. Is it correct on the part of the Government to make so many irregularities ? Is it correct to frame such rules which are defective ? I feel that even the promulgation of the ordinance is not conducive to the proper functioning of this House. I feel that even the legislative powers of the Governor also are limited to some extent. Unless he is satisfied with the circumstances of the case he cannot probably issue such an ordinance. The Resolution of Sri Gopala Gowda also refers to this. It is not enough if the Governor is satisfied on subjective basis.

Mr. SPEAKER.—Satisfied on what ?

Sri ANNA RAO GANAMUKHI.—Subjective satisfaction is not enough, but there must be objective satisfaction that the ordinance is necessary.

Mr. SPEAKER.—Who should sit in judgment over that, the Hon'ble Member or the House ?

Sri ANNA RAO GANAMUKHI.—The High Court is sitting in judgment. The Ordinance is justiciable.

Mr. SPEAKER.–Are we functioning as High Court or as Legislature ?

Sri ANNA RAO GANAMUKHI.—Legislative powers are used by the Governor. That power of the Governor is on par with the power of this House because it is actually a law made by the Governor.

11-00 A.M.

Mr. SPEAKER.—Therefore, does the Hon'ble Member suggest that the Governor has no power to promulgate an ordinance ?

Sri ANNA RAO GANAMUKHI.—It is not that. What I say is that ordinances which are not in keeping with the law should not be passed. I do not know whether there was any necessity at all to pass this ordinance. I learn that the writs were disposed of by the High Court in 1961 or 1963 and the ordinance was passed very recently. What is the justification for the ordinance? If at all there was any necessity for it, it was in 1962 or 1963 and not in 1965. In order to overcome certain difficulties, the Government has come out with such an ordinance. After all, the Governor acts on the advice of the Council of Ministers. Therefore, we need not say anything against the Governor; it is the Government which is responsible. Unless six weeks expire, I do not think such a legislation can be brought forward before this House. It is not really replacing an ordinance; it is a fresh Bill.

Mr. SPEAKER.—Six weeks from what date?

Sri ANNA RAO GANAMUKHI.—From the 18th of this month.

Mr. SPEAKER.—That is the last date by which it should be placed before the Legislature.

Sri ANNA RAO GANAMUKHI.—If before the expiration of that period, a resolution disapproving of it is passed by the Legislative Assembly...

Mr. SPEAKER.—So, it must be disapproved. If merely giving notice and introducing a resolution amounts to disapproval, then the member is at liberty to canvass that view point.

Sri ANNA RAO GANAMUKHI.—When the resolution is under discussion, the Bill should not come up for consideration.

Mr. SPEAKER.—That is totally diffierent. The member is shifting from position to position.

Sri ANNA RAO GANAMUKHI.—Whatever be the difficulties in the issue of an ordinance, my submission is that in future Government should take steps to bring a regular legislation before this House regarding recruitment so that no irregularity will be committed in future and Government may not have to take the help of the Governor to issue an ordinance or rules under the proviso to article 309 of the Constitution.

† ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ಸ್ವಾಮಿ, ಶ್ರೀ ಗೋಪಾಲ ಗೌಡರು ಮಂಡಿಸಿರತಕ್ಕ ನಿರ್ಣಯವನ್ನೂ ಮತ್ತು ಸರ್ಕಾರದವರು ಮಂಡಿಸಿರತಕ್ಕ ಮಸೂದೆಯನ್ನೂ, ಈ ಎರಡನ್ನೂ ಒಟ್ಟಿಗೆ ಚರ್ಚೆ ಮಾಡಬೇಕೆಂದು ತಾವು ಅಪ್ಪಣೆ ಕೊಡಿಸಿದ್ದೀರಿ. ಈಗತಾನೆ ಮಾತನಾಡಿದ ನನ್ನ ಅನೇಕ ಮಿತ್ರರು ರಾಜ್ಯಾಂಗದತ್ತವಾಗಿ ಸರ್ಕಾರಕ್ಕೆ ಇರತಕ್ಕ ಅಧಿಕಾರವೇನು ಎಂಬುದನ್ನು ಚರ್ಚೆ ಮಾಡಿದ್ದಾರೆ. ಆದರೆ ನಾವು ಈ ವಿಚಾರದಲ್ಲಿ ಅಷ್ಟೇನೂ ಹೆಚ್ಚಿಗೆ ಮಾತನಾಡಬೇಕಾದ ಅವಶ್ಯಕತೆಯಿಲ್ಲ. ಮೊದಲು ಸರ್ಕಾರದವರು ಪಿ.ಎಸ್.ಸಿ.ಗೆ ಇದ್ದ ಅಧಿಕಾರವನ್ನು ತಾವೇಕೆ ತೆಗೆದುಕೊಂಡರು ? ಇವರಿಗೆ ಹಾಗೆ ಮಾಡಬಹುದು ಎಂದು ಯಾರು ಬುದ್ಧಿವಾದ ಹೇಳಿದರು ? ಡಿವಿಜನಲ್ ರಿಕ್ರೂಟ್‌ಮೆಂಟ್ ಕಮಿಟಿಗಳನ್ನೂ ಮತ್ತು ಸ್ಟೇಟ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿಗಳನ್ನೂ ಮಾಡಿ ಸರ್ಕಾರದವರು ತನ್ಮೂಲಕ ಅಲ್ಲಿ ನಡೆದಿರತಕ್ಕ ಅನಂತ ಅನ್ಯಾಯಪರಂಪರೆಗಳನ್ನು ಇಲ್ಲಿ ತಂದು ಈ ದಿವಸ ಇದನ್ನೆಲ್ಲಾ ಸದಸ್ಯರು ಒಪ್ಪಿಕೊಳ್ಳಬೇಕು, ನೀವು ಇದನ್ನು ಸಿಂಧು ಮಾಡಬೇಕೆಂದು ಒತ್ತಾಯ ಮಾಡತಕ್ಕದ್ದು ನ್ಯಾಯವೇ ಎಂದು ಕೇಳುತ್ತೇನೆ? ಈ ಹಿಂದೆ ಸರ್ಕಾರದವರು ಇದೇ ಸಭೆಗೆ, ಮುಂದೆ ಒಂದು ನಿರ್ಣಯವನ್ನು ತಂದು ರಾಜ್ಯದಲ್ಲಿ ಡಿವಿಜನಲ್ ರೆಕ್ರೂಟ್‌ಮೆಂಟ್ ಕಮಿಟಿಗಳನ್ನೂ ಮತ್ತು ಸ್ಟೇಟ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ರೆವಲ್ ರೆಕ್ರೂಟ್‌ಮೆಂಟ್ ಕಮಿಟಿಗಳನ್ನೂ ರಚನೆಮಾಡಬೇಕೆಂದು ಚರ್ಚೆ ನಡೆಯುತ್ತಿದ್ದ ಕಾಲಕ್ಕೆ ಈ ಸಮಿತಿಗಳನ್ನು ಮಾಡುವುದರಿಂದ ಯಾವ ಅನ್ಯಾಯವೂ ಆಗುವುದಿಲ್ಲ, ಇದಕ್ಕೆ ಯಾವ ಕಾನೂನಿನ ಅಡ್ಡಿ ಅಡಚಣೆಯೂ ಬರುವುದಿಲ್ಲ, ಇದರಿಂದ ಯಾವ ತೊಂದರೆಯೂ ಆಗುವುದಿಲ್ಲ ಎಂದು ಇಲ್ಲಿ ವಾದ ಮಾಡಲು ಸರ್ಕಾರಕ್ಕೆ ಒಂದು ಅಡ್ವೈಜನ್ನು ಮಾಡಿದ್ದರೋ ಅಂಥ ಕಾನೂನು ಪಂಡಿತರೇ ಈ ಮಂತ್ರಿ ಮಂಡಲವನ್ನು ಇಂದು ಇಂಥ ಒಂದು ಪೇಚಿನಲ್ಲಿ ಸಿಕ್ಕಿಸಿ ಈಗ ಪುನಃ ಅದೇ ಕಾನೂನು ಪಂಡಿತರು ಈ ಒಂದು ಕ್ರಮ ಕೈಗೊಳ್ಳಬೇಕೆಂದು ಸರ್ಕಾರಕ್ಕೆ ಮತ್ತೆ ಅಡ್ವೈಜ್ ಮಾಡಿದ್ದಾರೆ. ಇದೇನು ವಿಚಿತ್ರವೋ ನನಗೆ ಅರ್ಥವಾಗುತ್ತಿಲ್ಲ. ಹೀಗೆ ದಿನವೂ ಸರ್ಕಾರಕ್ಕೆ ಒಂದು ಕಾಲೇಜಿನ ಅಡ್ಮಿಷನ್ ವಿಚಾರದಲ್ಲಾಗಲೀ, ಒಂದು ನೌಕರಿಯನ್ನು ಕೊಡತಕ್ಕ ವಿಚಾರದಲ್ಲಾಗಲೀ ಅಥವಾ ಮತ್ತೆ ಯಾವ ಒಂದು ವಿಚಾರದಲ್ಲಾಗಲೀ ಅಡ್ವೈಜ್ ಮಾಡಿ ಇವರನ್ನು ದಿನವೂ ಪೇಚಿನಲ್ಲಿ ಸಿಕ್ಕಿಸುತ್ತಿರುವವರು ಯಾರೆಂಬುದೇ ತಿಳಿಯದಾಗಿದೆ. ಆಗಲೇ ಮಾತನಾಡಿದ ಶ್ರೀಮಾನ್ ರಂಗನಾಥನ್ ಅವರು ಇಲ್ಲಿ ಆಡಳಿತನಡೆಸುವುದಕ್ಕೆ 5 ವರ್ಷಗಳಿಗೊಮ್ಮೆ ಒಂದು ಸರ್ಕಾರ ಬರುತ್ತದೆ. ಆದುದರಿಂದ ಮಂತ್ರಿ ಮಂಡಲಕ್ಕೆ ಒಂದು ಸರಿಯಾದ ಸಲಹೆಯನ್ನು ಕೊಡಲು ಒಂದು ಖಾಯಂ ಸೆಕ್ರೆಟೇರಿಯಟ್ಟನ್ನು ಇಟ್ಟು ಅದಕ್ಕೊಬ್ಬ ಚೀಫ್ ಸೆಕ್ರೆಟರಿಗಳನ್ನು ಅವರಿಗೆ ತಿಂಗಳಿಗೆ 5 ಸಾವಿರ ರೂಪಾಯಿಗಳ ಸಂಬಳ ನಿಗದಿ ಮಾಡಿ ಅವರ ಜೊತೆಗೆ ಲಾ ಸೆಕ್ರೆಟೇರಿಯಟ್ಟನ್ನಿಟ್ಟು ಕೆಲಸಮಾಡುತ್ತಿದ್ದಾಗ್ಯೂ ಅವರೇನು ಅಡ್ವೈಜ್ ಕೊಡುತ್ತಾರೋ ಗೊತ್ತಾಗುತ್ತಿಲ್ಲ ಎಂದು ಹೇಳಿದರು. ಹೀಗೆ ಈ ಸೆಕ್ರೆಟೇರಿಯಟ್ ಸಿಬ್ಬಂದಿಯವರು ಸರ್ಕಾರಕ್ಕೆ ಕೊಡುತ್ತಿರುವ ಅಡ್ವೈಜಿನಿಂದ ಇವರು ದಿನವೂ ಪೇಚಿಗೆ ಸಿಕ್ಕಿಕೊಳ್ಳುತ್ತಿದ್ದಾಗ್ಯೂ ಇವರಿಗೆ ದಿನವಹಿ ಈ ಅನುಭವ ಬಂದಿದ್ದಾಗ್ಯೂ ಸರ್ಕಾರದವರಿಗೆ ಈಗಲೂ ಅವರು ಹೇಳಿರತಕ್ಕ ಸಲಹೆಯಲ್ಲಿ ವಿಶ್ವಾಸವಿದ್ದಂತೆ ಇಲ್ಲಿ ಈ ಸಭೆಯ ಮಾನ್ಯ ಸದಸ್ಯರು ಕೊಡತಕ್ಕ ಸಲಹೆಯಲ್ಲಿ ಇವರಿಗೆ ಮಾನ್ಯತೆಯಿರುವುದಿಲ್ಲ. ನೆನ್ನೆಯ ದಿನ ಒಂದು ಮಸೂದೆಯನ್ನು ತಂದು ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮುಂದಕ್ಕೆ ಹಾಕಬೇಕೆಂದು ಮಾಡಿದರು. ಹಿಂದೆ ಇವರು ನೇಮಕ ಮಾಡಿದ್ದ 40 ಜನ ತಹಶೀಲ್ದಾರರು ಹೈಕೋರ್ಟ್ ಮುಗಿದು ಸುಪ್ರೀಂ ಕೋರ್ಟಿನವರೆಗೆ ಹೋಗಿ ಹೋರಾಡಿದರೂ ಅವರ ಕೆಲಸ ಆಗಲಿಲ್ಲ. ಇದಕ್ಕೆಲ್ಲಾ ಕಾರಣ ಸರ್ಕಾರದವರು ಶಾಸನಗಳನ್ನು ತರಾತುರಿಯಲ್ಲಿ ಮಾಡುತ್ತಿರುವುದೇ ಆಗಿದೆ. ಈಗ ಕ್ಲಾಸ್ IIIನೇ ನೌಕರರ ಒಂದು ಕೇಸು ಹೈಕೋರ್ಟಿನ ಮುಂದೆ ಹೋಗಿರುವಾಗ ಸರ್ಕಾರದವರು ಇಲ್ಲಿ ಒಂದು ಮಸೂದೆಯನ್ನು ತಂದು ಹಿಂದೆ ಇವರು ಮಾಡಿರತಕ್ಕ ಅಕ್ರಮಗಳನ್ನೆಲ್ಲಾ ರಿಟ್ರಾಸ್ಪೆಕ್ಟೀವಾಗಿ ಸರಿಪಡಿಸಲಾಗಿದೆ ಎಂದು ಕಾನೂನನ್ನು ಪಾಸ್‌ಮಾಡಬೇಕೆಂದು ಕೇಳುತ್ತಿದ್ದಾರೆ. ಹಿಂದೆ ನಡೆಸಿರತಕ್ಕ ಅಕ್ರಮ ನಡವಳಿಕೆಗಳ ಬಗ್ಗೆ ಇಂದು ನಾವು ರಿಟ್ರಾಸ್ಪೆಕ್ಟೀವಾಗಿ ಅವುಗಳನ್ನು ಸರಿಪಡಿಸಬಹುದು ಅನ್ನುವುದಾಗಿದ್ದರೆ, ಇದೇ ಮಾನ್ಯ ಸಭೆಯ ಶ್ರೀ ಕೃಷ್ಣಸೆಟ್ಟರನ್ನು ರಕ್ಷಣಾ ಶಾಸನದ ಬಗ್ಗೆ ದಸ್ತಗಿರಿ ಮಾಡಿದ್ದಾಗ ಅವರ ಸಂಸಾರಕ್ಕೆ ಅಲೋಯನ್ಸ್‌ನ್ನು ಕೊಡಿ ಎಂದರೆ, ಅಲ್ಲಿ ರಿಟ್ರಾಸ್‌ಪೆಕ್ಟೀವಾಗಿ ಕೊಡುವುದಕ್ಕಾಗುವುದಿಲ್ಲ ಎಂದರು. ಹೀಗೆ ಒಂದು ಕಡೆ ರಿಟ್ರಾಸ್ಪೆಕ್ಟೀವಾಗಿ ಎಫೆಕ್ಟಿಗೆ ಕೊಡಬಹುದು, ಇನ್ನೊಂದು ಕಡೆ ಕೊಡುವುದಕ್ಕಾಗುವುದಿಲ್ಲ ಎಂದು ಸರ್ಕಾರಕ್ಕೆ ಯಾರು ಅಡ್ವೈಜ್ ಮಾಡಿದರು ?

ಒಂದು ಕಡೆ ಒಂದು ಕಾನೂನಿಗೆ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಬರುತ್ತದೆ ಇನ್ನೊಂದು ಕಡೆ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಬರುವುದಿಲ್ಲ. 40 ಜನ ತಹಸೀಲ್ದಾರ್‌ರನ್ನು ಸುಪ್ರೀಂ ಕೋರ್ಟಿನಲ್ಲಿ ತೆಗೆದುಹಾಕಿದ್ದನ್ನು ವ್ಯಾಲಿಡೇಟ್ ಮಾಡುವುದಕ್ಕೆ ಏನು ಕಾನೂನು ತರುತ್ತೀರಿ ಎಂದು ಕೇಳುತ್ತೇನೆ. ಇದರಲ್ಲಿ ಅಸಂಬದ್ಧವಾದ ಪ್ರಲಾಪ ಇದೆ. ಇದರಲ್ಲಿ

> "due to some defect in the constitution of the said Committees and the non-compliance with certain rules in making the selections by such Committees ;
>
> And whereas in certain judicial proceedings it has been held that recruitments to Class III Posts in the Mysore State Civil Services made before December 1962, by a Divisional Level Recruitment Committee are illegal on the ground that the rules made by the Governor had no retrospective effect and certain other recruitments made by the Divisional Recruitment Committees have been questioned in other judicial proceedings"

ಎಂದು ಹೇಳಿದೆ. ಇದನ್ನೆಲ್ಲಾ ಸರಿಮಾಡಬೇಕೆಂದು ಕಾನೂನು ಮಾಡುವುದಾದರೆ, ನಿಮಗೆ ಇಷ್ಟೊಂದು ದೊಡ್ಡ ಎಸ್ಟಾಬ್ಲಿಷ್‌ಮೆಂಟ್ ? ಅವರು ಚಾಪೆ ಕೆಳಗೆ ತೂರಿದರೆ ನೀವು ರಂಗೋಲಿ ಕೆಳಗೆ ತೂರುವುದಕ್ಕೆ ಪ್ರಯತ್ನ ಮಾಡುವುದು ಏತಕ್ಕೆ ಎಂದು ಅರ್ಥವಾಗುವುದಿಲ್ಲ. ಇಂತಹ ಕಾನೂನು ವಿಷಯ ಬಂದಾಗ ಸ್ವಲ್ಪ ದೀರ್ಘವಾಗಿ ಚರ್ಚೆ ಆಗಬೇಕು. ಸಣ್ಣ ಪುಟ್ಟ ಕಾಯಿದೆ ಇದ್ದರೆ ಪರವಾಯಿಲ್ಲ. ಕಾಂಪ್ರಿಹೆನ್ಸೀವ್ ರೆಕ್ರೂಟ್‌ಮೆಂಟ್ ರೂಲ್ಸ್ ತೆಗೆದುಕೊಂಡು ಬಂದು ಇಟ್ಟು, ಹೀಗೆ ಆಗಬೇಕು ಎಂದು ಚರ್ಚೆ ಮಾಡಿ ನಮ್ಮ ಸೀಲ್ ಅದಕ್ಕೆ ಹಾಕಿಸಿಕೊಂಡಿರಿ ? ಅದನ್ನು ಬಿಟ್ಟು ಪೀಸ್ ಮೀಲ್ ಆಗಿ ಮಾಡಿದ ಕೆಲಸವನ್ನು ಯಾವುದಾದರೂ ಜುಡಿಷಿಯಲ್ ಟ್ರಿಬ್ಯೂನಲ್, ನೀವು ಮಾಡಿದ್ದು ಕಾನೂನಿಗೆ ವಿರೋಧವೆಂದು ಹೇಳಿದಾಗ, ಅದನ್ನು ಸರಿ ಮಾಡುವುದಕ್ಕೆ ಕಾನೂನು ತರುವುದು ಉಚಿತವಲ್ಲ. ನಿಜವಾಗಿಯೂ ಇದು ಯಾವುದೇ ನಾಗರಿಕ ಸರ್ಕಾರಕ್ಕೆ ಗೌರವ ತರತಕ್ಕಂಥಾದ್ದಲ್ಲ. ಅದಕ್ಕೋಸ್ಕರ ಸರ್ಕಾರದವರು ಈ ವಿಷಯದಲ್ಲಿ ಸುದೀರ್ಘವಾಗಿ ಯೋಚನೆ ಮಾಡಬೇಕು.

† ಶ್ರೀ ಎಚ್. ಆರ್. ಕೇಶವ ಮೂರ್ತಿ.—ಸ್ವಾಮಿ, ಅಧ್ಯಕ್ಷರೇ, ಈ ವಿಷಯದಲ್ಲಿ ನಮ್ಮ ಸ್ನೇಹಿತರು ಪೂರ್ಣವಾಗಿ ವಿವರಣೆ ಕೊಟ್ಟಿದ್ದಾರೆ. ಕಾನ್‌ಸ್ಟಿಟ್ಯೂಷನ್‌ನಿನ 309 ನೇ ಆರ್ಟಿಕಲ್‌ನಲ್ಲಿ :

"Subject to the provisions of this Constitution, Acts of the appropriate Legislature may regulate the recruitment, and conditions of service of persons appointed, to public services and posts in connection with the affairs of the Union or of any State .... the Governor of a State or such person as he may direct in the case of services and posts in connection with the affairs of the State, to make rules regulating the recruitment and the conditions of service of persons appointed, to such services and posts until provision in that behalf is made by or under an Act of the appropriate Legislature under this article, and any rules so made shall have effect subject to the provisions of any such Act."

ಎಂದು ಇದೆ. ನಾನು ಕೇಳುವುದು ಇಷ್ಟೆ. 1961 ರಲ್ಲಿ ಒಂದು ಕಾನೂನು ಮಾಡಿ ಅದಕ್ಕೆ ರೂಲ್ಸ್ ಮಾಡಿ ಅದರಂತೆ ಸರ್ಕಾರದ ನೌಕರರಿಗೆ ನೇಮಕಮಾಡಿಕೊಂಡು ಬಂದಿದ್ದೀರಿ. ಇದನ್ನು ನಮ್ಮ ಗಮನಕ್ಕೆ ತರಲು 4 ವರ್ಷ ಯಾತಕ್ಕೆ ನಿಧಾನ ಮಾಡಿದಿರಿ ? ತಮ್ಮ ಸ್ವಾರ್ಥ ಸಾಧನೆಗಾಗಿ ಒಂದು ಕಾನೂನು ಮಾಡಿ ಸಭೆಯ ಗಮನಕ್ಕೆ ತರದೆ ಇಂತಹ ಅಕೃತ್ಯಗಳನ್ನು ಮಾಡುತ್ತಾ ಇದ್ದೀರಿ. ನಿಮಗೆ ಒಂದೇ ಒಂದು ವಜ್ರ ಕವಚ ಇದೆ. ತಾವು ಏನು ಮಾಡಿದರೂ ಕೂಡ ತಮ್ಮ ಪಾರ್ಟಿಯವರು ಬೆಂಬಲ ಕೊಡುತ್ತಾ ಇರುವುದರಿಂದ, ಇಂತಹ ಅನ್ಯಾಯದ ಕೆಲಸಕ್ಕೆ ಒಂದು ಅವಕಾಶವಾಗಿದೆ. ಆದರೆ ಇವೊತ್ತಿನ ದಿವಸ ಡಿಮಾಕ್ರಸಿ ಇರುವಾಗ ಲೆಜಿಸ್ಲೇಚರ್ ಎಂದು ಇರುವಾಗ, ತಮ್ಮ ತಮ್ಮ ಪಾರ್ಟಿಯ ಬಲದಿಂದ ಕಾನೂನು ಕೋರ್ಟು ಕಾನ್‌ಸ್ಟಿಟ್ಯೂಷನ್ ಎಲ್ಲಕ್ಕೂ ಮಣ್ಣು ಮುಕ್ಕಿಸುವ ಅಕೃತ್ಯ ಮಾಡಿದರೆ, ಆ ಅಕೃತ್ಯಗಳ ಫಲವನ್ನು ಮುಂದೆ ಅನುಭವಿಸಬೇಕಾಗುತ್ತದೆ. ಈ ಸರ್ಕಾರದವರು ಮತ್ತು ಅವರ ಹಿಂಬಾಲಕರು ಕೂಡ ಅದನ್ನು ಅನುಭವಿಸಬೇಕಾಗುತ್ತದೆ ಎಂದು ಹೇಳುತ್ತೇನೆ. ಆರ್ಟಿಕಲ್ 320 ರಲ್ಲಿ :

"(1) It shall be the duty of the Union and the State Public Service Commissions to conduct examinations for appointments to the services of the Union and the services of the State respectively...........(3) The Union Public Service Commission or the State Public Service Commission, as the case may be, shall be consulted—

(*a*) on all matters relating to methods of recruitment to civil services and for civil posts ;"

ಎಂದು ಇದೆ. ಈ ತರಹ ಕಾನೂನು ಸ್ಪಷ್ಟವಾಗಿ ಇದ್ದರೂ ಕೂಡ ಪಬ್ಲಿಕ್ ಸರ್ವಿಸ್ ಕಮೀಷನ್ ಇಗ್‌ನೋರ್ ಮಾಡಿ ಈ ತರಹ ಮಾಡುತ್ತಾ ಇದ್ದರೆ ನಾನು ಕೇಳುವುದು ಇಷ್ಟೆ : ತಾವು ತಪ್ಪು ಮಾಡುವುದು, ಸರಿ ಮಾಡಿಕೊಳ್ಳುವುದು, ನಮ್ಮನ್ನು ಸಿಕ್ಕಿ ಹಾಕಿ

(ಶ್ರೀ ಎಚ್. ಆರ್. ಕೇಶವ ಮೂರ್ತಿ)

ಕೊಳ್ಳುವುದು. ನಿಮ್ಮನ್ನು ಸಿಕ್ಕಿಸಿಕೊಳ್ಳುವುದು. ನಮ್ಮನ್ನು ಏತಕ್ಕೆ ಸಿಕ್ಕಿ ಹಾಕಬೇಕು ? ಏತಕ್ಕೋಸ್ಕರ ಜನರು ಕೋರ್ಟಿಗೆ ಹೋದರು ಮಾಡಿರತಕ್ಕ ಅನ್ಯಾಯಗಳನ್ನು ಸಹಿಸಲಿಕ್ಕೆ ಆಗದೆ ಕಾನೂನು ರಕ್ಷಣೆ ಪಡೆಯುವುದಕ್ಕೆ ಹೋದರು. "Justice is always bitter" ಎಂದು ಹೇಳುತ್ತಾರೆ. ಕಾನೂನು ಸ್ವಲ್ಪ ಕಹಿಯಾಗಿರುತ್ತದೆ. ಅವರು ರಕ್ಷಣೆ ಪಡೆದುಕೊಂಡು ಈ ಸರ್ಕಾರ ಮಾಡಿರತಕ್ಕ ಅನ್ಯಾಯವನ್ನು ಹೊರಗೆಡಿವಿದ ಮೇಲೆ ರಕ್ಷಣೆ ತೆಗೆದುಕೊಳ್ಳುವುದಕ್ಕೆ ಇಲ್ಲಿಗೆ ಬಂದಿರಿ. ಈ ತರಹ ಕೋರ್ಟು ಜಡ್ಜ್‌ಮೆಂಟ್ ಪಾಸ್ ಮಾಡದೇ ಇದ್ದ ಪಕ್ಷದಲ್ಲಿ ಈ ಸಭೆಗೆ ತರುತ್ತಿದ್ದಿರೇ ಎಂದು ಅನುಮಾನವಾಗುತ್ತದೆ. ಮುಂದೆ ಹೀಗೆ ಮಾಡದೆ ಸರಿಯಾಗಿ ವರ್ತಿಸುತ್ತೀರಿ ಎಂದು ತಿಳಿದುಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ. ಶ್ರೀಮಾನ್ ಗೋಪಾಲಗೌಡರು ತಂದಿರತಕ್ಕ ನಿರ್ಣಯ ಈ ರೀತಿ ಇದೆ:

"This Hoouse disapproves the Mysore State Civil Services Class III Posts Recruitment (Validation) Ordinance 1965."

ನಮ್ಮ ಸರ್ಕಾರದಿಂದ ಹೊರಡಿಸಿರತಕ್ಕಂಥ ಈ ಆರ್ಡಿನೆನ್ಸ್‌ನ್ನು ಮೂರು ಕಾರಣಗಳಿಂದಾಗಿ ಒಪ್ಪಬಾರದು ಎಂದು ಹೇಳಿದ್ದಾರೆ. ಮೊದಲನೆಯದಾಗಿ ಹೈಕೋರ್ಟಿನವರು ಕೊಟ್ಟಿರತಕ್ಕಂಥ ತೀರ್ಮಾನವನ್ನು ಬದಲಾವಣೆ ಮಾಡುವುದಕ್ಕೆ ಅಥವಾ ಜಾರಿಗೆ ಬಾರದ ಹಾಗೆ ಮಾಡುವುದಕ್ಕೆ ತಂದಿರತಕ್ಕ ಆರ್ಡಿನೆನ್ಸ್ ಆಗಿರುವುದರಿಂದ ಒಪ್ಪಕೂಡದು. ಎರಡನೆಯದು, ಈ ಒಂದು ಆರ್ಡಿನೆನ್ಸ್ ಜಾರಿಗೆ ಬರುವುದರಿಂದ, ಈಗ ಕೆಲಸದಲ್ಲಿರತಕ್ಕಂಥ ಅನೇಕ ಜನರು ಕೆಲಸ ಬಿಡಬೇಕಾಗಿ ಬರುತ್ತದೆ, ಅವರಿಗೆ ಬಹಳ ತೊಂದರೆಯಾಗುತ್ತದೆ, ಸರ್ಕಾರದ ಕೆಲಸ ಕಾರ್ಯಗಳ ಎಫಿಷಿಯನ್ಸಿ ಕೂಡ ಕಡಿಮೆಯಾಗುತ್ತದೆ ಎಂಬುದು, ಮತ್ತು ಮೂರನೆಯ ಕಾರಣ ಸಾರ್ವಜನಿಕ ಹಿತ ದೃಷ್ಟಿಯಿಂದ ಇದನ್ನು ಒಪ್ಪಕೂಡದು ಎಂಬುದು. ಕಾರಣಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಮೊದಲನೆಯದು ಕಾನೂನಿಗೆ ಸಂಬಂಧಪಟ್ಟ ಹಾಗೆ. ಎರಡನೆಯದು ಸರ್ಕಾರದ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಈ ಆರ್ಡಿನೆನ್ಸ್ ಬರುವುದರಿಂದ ತೊಂದರೆಯಾಗುತ್ತದೆ ಎಂಬುದು. ಅಂದರೆ, ಕೆಲಸಕಾರ್ಯಗಳನ್ನು ನಡೆಸುತ್ತಾ ಹಾಲಿ ಕೆಲಸದಲ್ಲಿ ಇರತಕ್ಕಂಥ ನೌಕರರಿಗೆ ತೊಂದರೆಯಾಗುತ್ತದೆ, ಅವರ ಮೇಲಿನ ಕೃಪಾದೃಷ್ಟಿಯಿಂದ, ಅವರ ವಿಚಾರದಲ್ಲಿ ಒಂದು ಅನುಕಂಪ ಉಂಟಾಗಿರುವುದರಿಂದ ಅವರ ರಕ್ಷಣೆಯನ್ನು ಮಾಡುವ ದೃಷ್ಟಿಯಲ್ಲಿ ಈ ಆರ್ಡಿನೆನ್ಸ್‌ನ್ನು ತರಬಾರದು ಎಂದು ಅವರು ಹೇಳಿದಂಥ ವಾದದಿಂದ ತಿಳಿದುಬರುತ್ತದೆ.

ಇನ್ನು ಕಾನೂನಿನ ಭಾಗ. ಒಂದು ಸಂತೋಷದ ವಿಚಾರ, ಮಾನ್ಯ ಗೋಪಾಲಗೌಡರೂ ಸಹ ಸರ್ಕಾರದವರು ಆರ್ಡಿನೆನ್ಸ್ ತರತಕ್ಕ ಕಾರಣವಿಲ್ಲ ಅಥವಾ ತರುವುದಕ್ಕೆ ಅಧಿಕಾರವಿಲ್ಲ ಎಂದು ಹೇಳಲಿಲ್ಲ. ಆರ್ಡಿನೆನ್ಸ್ ತರುವುದಕ್ಕೆ ಗೌವರ್ನರ್ ಅವರಿಗೆ ಅಧಿಕಾರ ಇದೆ ಎಂದು ಹೇಳಿ ರಾಜ್ಯಾಂಗದಲ್ಲಿ ಏನಿದೆಯೋ ಅದನ್ನು ಅವರೂ ಒಪ್ಪುತ್ತಾರೆ. ರಾಜ್ಯಾಂಗದಲ್ಲಿ ಅಧಿಕಾರ ಇದ್ದರೂ ಸಹ ಅದನ್ನು ಉಪಯೋಗ ಮಾಡಿದಂತಹ ಸಂದರ್ಭ ಸರಿಯೇ, ಇಲ್ಲವೇ, ಯಾವ ಕಾರಣಕ್ಕಾಗಿ ಸರ್ಕಾರದವರು ಈ ಕಾನೂನನ್ನು ಉಪಯೋಗ ಮಾಡಿದ್ದಾರೆ ಎಂಬ ಬಗ್ಗೆ ಆ ಕಾರಣ ಸಮಂಜಸವಾಗಿ ಅವರ ದೃಷ್ಟಿಯಲ್ಲಿ ಕಾಣುತ್ತಾ ಇಲ್ಲ ಎನ್ನುವುದು ಅವರ ವಾದ. ಆದ್ದರಿಂದ ಕಾನೂನಿನ ದೃಷ್ಟಿಯಿಂದ ಇದು ಸರಿ ಎಂದು ಅವರು ಒಪ್ಪಿದ ಮೇಲೆ ನಾನು ಅದರ ಬಗ್ಗೆ ಹೆಚ್ಚು ವಾದ ಮಾಡಬೇಕಾದ ಆಗತ್ಯ ಇಲ್ಲ. ಇನ್ನು ಯಾವ ಸಂದರ್ಭದಲ್ಲಿ ಇದನ್ನು ತಂದಿದ್ದೇವೆ, ಈ ಸಂದರ್ಭ ಸರಿಯಾದ್ದೋ ಅಲ್ಲವೇ ಎಂದರೆ, ಸರಿಯಲ್ಲ ಎಂದು ಏನು ಅವರು ಅಭಿಪ್ರಾಯ ಹೇಳುತ್ತಾ ಇದ್ದಾರೆ, ಅದು ಅವರ ಅಭಿಪ್ರಾಯದ ಮಾತು. ಕಾನೂನು ತರುವುದು ಸರಿಯೇ ಅಲ್ಲವೇ ಎಂಬುದನ್ನು ವಿಮರ್ಶೆ ಮಾಡುವುದಕ್ಕಿಂತ ಮುಂಚೆ ಏನು ನಡೆದಿದೆ, ಸಂಸ್ಥಾನದಲ್ಲಿ ಇದುವರೆಗೂ, ಯಾವ ಹಿನ್ನೆಲೆಯಲ್ಲಿ ಈ ಕಾನೂನನ್ನು ತರಬೇಕಾಗಿದೆ, ಆರ್ಡಿನೆನ್ಸ್ ಆಗಲಿ, ಬಿಲ್ ಆಗಲಿ ಎಂಬುದನ್ನೂ ಕೂಡ ಸ್ವಲ್ಪ ವಿಮರ್ಶೆ ಮಾಡಿದರೆ ಆಗ ಬಹುಶಃ ಗೋಪಾಲಗೌಡರಾಗಲಿ, ಅವರ ಠರಾವನ್ನು ಒಪ್ಪಿ ಮಾತನಾಡಿದಂತಹ ಸದಸ್ಯರಾಗಲಿ ಅವರೂ ಕೂಡ ಪುನರಾಲೋಚನೆ ಮಾಡಿ ಈ ಠರಾವನ್ನು ತಂದದ್ದು ಸರಿಯಲ್ಲ ಎಂದು ತಿಳಿಯುತ್ತಾರೆ ಎಂದು ನನ್ನ ಭಾವನೆ. ಸ್ವಾಮಿ, ಸಂಸ್ಥಾನದಲ್ಲಿ 3 ನೇ ದರ್ಜೆ ನೌಕರರಲ್ಲಿ ಮಿನಿಸ್ಟೀರಿಯಲ್ ಮತ್ತು ನಾನ್‌ಮಿನಿಸ್ಟೀರಿಯಲ್ ಎಂದು ಎರಡು ಭಾಗ ಇದೆ. ಗುಮಾಸ್ತರು ವಗೈರೆ ಮಿನಿಸ್ಟೀರಿಯಲ್. ಎಕ್ಸಿಕ್ಯೂಟೀವ್ ಭಾಗದ ಪೋಸ್ಟ್‌ನಲ್ಲಿ ನಾನ್ ಮಿನಿಸ್ಟೀರಿಯಲ್ ಬರುತ್ತದೆ. 1961ನೇ ಇಸವಿಯಿಂದ ಈ 3ನೇ ದರ್ಜೆಯ ನೌಕರರನ್ನು ಪಬ್ಲಿಕ್

ಸರ್ವಿಸ್ ಕಮಿಷನ್ ನವರೇ ಆರಿಸುತ್ತಾ ಇದ್ದರು. ಒಂದು ಸಂದರ್ಭದಲ್ಲಿ ಪಬ್ಲಿಕ್ ಸರ್ವೀಸ್ ಕಮಿಷನ್ ಅವರು ಈ ಅಧಿಕಾರಿಗಳನ್ನು ಚುನಾಯಿಸುವುದು ಸ್ವಲ್ಪ ತಡವಾಗುತ್ತಾ ಇತ್ತು. ತಡ ಆಗುವ ದೆಶೆಯಿಂದ ಅನೇಕ ಜನರನ್ನು ಸರ್ಕಾರದವರು ಕೆಲಸಕಾರ್ಯಗಳ ನಿರ್ವಹಣೆಯ ಪ್ರಯುಕ್ತ ಲೋಕಲ್ ಕ್ಯಾಂಡಿಡೇಟ್ಸ್ ಅಂತ ನೇಮಕ ಮಾಡಿಕೊಂಡು ಕೆಲಸ ಕಾರ್ಯಗಳನ್ನು ನಡೆಸಬೇಕಾಗಿತ್ತು. ನಿಧಾನವಾಗುವುದನ್ನು ತಪ್ಪಿಸುವ ದೃಷ್ಟಿಯಿಂದ, ಬಹಳ ಕಾಲ ಲೋಕಲ್ ಕ್ಯಾಂಡಿಡೇಟ್ಸನ್ನು ಇಟ್ಟುಕೊಂಡು ಕೆಲಸ ಮಾಡುವುದು ಸರಿಯಲ್ಲ ಎಂಬ ದೃಷ್ಟಿಯಿಂದ ಸರ್ಕಾರದವರು ಪಬ್ಲಿಕ್ ಸರ್ವೀಸ್ ಕಮಿಷನ್ ಅವರ ಜೊತೆಗೂ ಕೂಡ ಆಲೋಚನೆ ಮಾಡಿ 61 ನೇ ಇಸವಿ ಅಕ್ಟೋಬರ್ 27 ನೇ ತಾರೀಖಿನಲ್ಲಿ ಒಂದು ಆಜ್ಞೆಯನ್ನು ಹೊರಡಿಸಿ 3ನೇ ತರಗತಿ ನೌಕರರ ಆಯ್ಕೆಯನ್ನು ಪಬ್ಲಿಕ್ ಸರ್ವಿಸ್ ಕಮಿಷನ್ ಅವರು ಮಾಡುವುದಕ್ಕಿಂತ ಸ್ಟೇಟ್ ಲೆವಲ್ ಮತ್ತು ಡಿವಿಜನ್ ಲೆವಲ್ ಕಮಿಟಿಗಳನ್ನು ಮಾಡಿ ಅವರು ಚುನಾವಣೆ ಮಾಡಬಹುದು, ಆಯ್ಕೆ ಮಾಡಬಹುದು ಎಂದು ಹೇಳಿ ತಿಳಿಸಿದರು. ಈ ಆಜ್ಞೆ ಹೊರಟ ಮೇಲೆ, ಅದರ ಜೊತೆಯಲ್ಲಿಯೇ ಕೆಲವು ನಿಬಂಧನೆಗಳನ್ನೂ ಕೂಡ ಸರ್ಕಾರ ಹೊರಡಿಸಿತು. ಯಾವ ರೀತಿ ಚುನಾವಣೆ, ಆಯ್ಕೆ ನಡೆಯಬೇಕೆಂದು ಹೇಳಿ ಅದರಲ್ಲಿ ಸೂಚನೆ ಮಾಡಲಾಯಿತು. ಆದರೂ ಪ್ರತ್ಯೇಕವಾದಂತಹ ಕೆಲವು ನಿಬಂಧನೆಗಳನ್ನು ಮಾಡಬೇಕಾಗುತ್ತದೆ, ಆರ್ಟಿಕಲ್ 309 ರ ಪ್ರಕಾರ ಎಂದು ಹೇಳಿ 1961 ನೇ ಇಸವಿ ಆಜ್ಞೆ ಜಾರಿಗೆ ಬಂದ ಮೇಲೆ ಕೆಲವು ಡಿಪಾರ್ಟ್‌ಮೆಂಟುಗಳಲ್ಲಿ, ಇದು ವಿಮರ್ಶೆ ಆಗಿ ಬೇರೆ ಪ್ರತ್ಯೇಕವಾದ ರೂಲ್ಸ್ ಹೊರಡಿಸಬೇಕೆಂದು ಅವರು ಒಂದು ಅಭಿಪ್ರಾಯ ಕೊಟ್ಟಾಗ ಡಿಸೆಂಬರ್ 62ರಲ್ಲಿ ಈ ರೂಲ್‌ಗಳನ್ನು ಗವರ್ನರ್ ಅವರು ಹೊರಡಿಸಿದ್ದಾರೆ. 1961 ರಿಂದ 62 ರವರೆಗೂ ಎಂದರೆ ನಿಬಂಧನೆಗಳು ಜಾರಿಗೆ ಬರುವುದರವರೆಗೂ ಆಗಿದ್ದ ಕೆಲಸಕಾರ್ಯಗಳ ಬಗ್ಗೆ ಈ ರೂಲ್ಸ್ ರಿಟ್ರಾಸ್‌ಪೆಕ್ಟೀವ್ ಇಫೆಕ್ಟ್ ಕೊಡಬಹುದು ಎಂದು ಹೇಳಿದ್ದರು. ಹೈಕೋರ್ಟಿನವರು ಆ ರೀತಿ ರಿಟ್ರಾಸ್ಪೆಕ್ಟೀವ್ ಇಫೆಕ್ಟ್ ಕೊಡತಕ್ಕ ಅಧಿಕಾರ ಗವರ್ನರ್‌ಗೆ ಇಲ್ಲ ಈ ರೀತಿ ಆರ್ಡಿನೆನ್ಸ್ ಮಾಡಿರುವುದು ಸರಿಯಲ್ಲ ಎಂದು ಹೇಳಿದ್ದಾರೆ. ಆ ಭಾಗಕ್ಕೆ ಆಮೇಲೆ ಬರುತ್ತೇನೆ. 1962 ನೆಯ ಇಸವಿಯಿಂದ ಈ ರೂಲ್ಸ್‌ಗನುಸಾರವಾಗಿ ಇದುವರೆಗೂ ಸ್ಟೇಟ್ ಲೆವಲ್ ಮತ್ತು ಡಿವಿಜನಲ್ ಲೆವಲ್ ಕಮಿಟಿಯವರು ಈಗಾಗಲೇ ತಿಳಿಸಿರುವ ಹಾಗೆ ಸುಮಾರು 22,027 ಜನರನ್ನು ಆಯ್ಕೆ ಮಾಡಿದ್ದಾರೆ. ಸಂಸ್ಥಾನಾ ಮಳೆ ಎಲ್ಲಾ ಇದು ಸೇರಿದೆ. ಇಷ್ಟು ಜನರ ಪೈಕಿ ಸುಮಾರು 15 ಸಾವಿರ ಜನರು ಈಗಾಗಲೇ ಚುನಾಯಿತರಾಗಿ ಕೆಲಸದಲ್ಲಿದ್ದಾರೆ. ಇದುವರೆಗೂ ಒಟ್ಟು 22,413 ವೇಕೆನ್ಸಿಗಳು ಉಂಟಾಗಿತ್ತು. 22,413 ರ ಪೈಕಿ 22,027 ಜನರು ಚುನಾಯಿತರಾಗಿ ಅವರ ಪೈಕಿ 15,000 ಜನರು ಈಗಾಗಲೇ ಕೆಲಸಕ್ಕೆ ಬಂದಿದ್ದಾರೆ, ಇನ್ನು ಬಾಕಿಯವರು ಬರುವವರು ಇದ್ದಾರೆ. ಅವರು ಇನ್ನೂ ಹಾಲಿ ಕೆಲಸಕ್ಕೆ ಬಂದಿಲ್ಲ. ಶ್ರೀಮಾನ್ ಗೋಪಾಲಗೌಡರ ಕಳಕಳಿ ಏನಿದೆ, ಅನುಕಂಪ ಏನಿದೆ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸ ಮಾಡಿರುವವರೆಲ್ಲರಿಗೂ ತೊಂದರೆಯಾಗಿದೆ, ಅವರು ಮನೆಗೆ ಹೋಗಬೇಕಾಗಿ ಬರುತ್ತದೆ, ಕೆಲಸ ಸಿಕ್ಕುವುದಿಲ್ಲ ವಗೈರೆ ಏನು ಹೇಳಿದ್ದಾರೆ, ಅದೇ ಅನುಕಂಪ, ಅದೇ ಕರುಣೆ. ಈಗಾಗಲೇ ಅನೇಕ ಕಮಿಟಿಗಳಿಂದ ಚುನಾಯಿತರಾಗಿ ಈಗ ಕೆಲಸ ಮಾಡುತ್ತಾ ಇದ್ದಾರೆಯಲ್ಲಾ ಆ ಜನರೆಲ್ಲರೂ ಮಾಡಿದಂತಹ ಕೆಲಸಕಾರ್ಯಗಳು ರದ್ದಾದ ಪ್ರಯುಕ್ತ ಆ ಕಾರಣದಿಂದ ಅವರನ್ನು ಮನೆಗೆ ಕಳುಹಿಸುವುದಾದರೆ ಆಗ ಅವರ ಬಗ್ಗೆ ಶ್ರೀಮಾನ್ ಗೋಪಾಲಗೌಡರಿಗಾಗಲಿ ಇತರ ಮಾನ್ಯ ಸದಸ್ಯರಿಗಾಗಲಿ ಅನುಕಂಪ ಇಲ್ಲವೇ ಎಂಬು ಪ್ರಶ್ನೆಗೆ ಅವರೇ ಉತ್ತರವನ್ನು ಕೊಟ್ಟುಕೊಳ್ಳಬೇಕೆಂದು ನಾನು ಭಾವಿಸುತ್ತೇನೆ. ಈಗ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸ ಮಾಡುತ್ತಾ ಇರುವವರ ಸಂಖ್ಯೆ 4,936 ಜನರು, ಅವರು ನಾನಾ ಇಲಾಖೆಗಳಲ್ಲಿ 3ನೆ ದರ್ಜೆ ನೌಕರರಾಗಿ ಕೆಲಸ ಮಾಡುತ್ತಾ ಇದ್ದಾರೆ. ರೆಕ್ರೂಟ್‌ಮೆಂಟ್ ಕಮಿಟಿ ಮುಂದೆ ಹೋದ 22 ಸಾವಿರ ಚಿಲ್ಲರೆ ಜನರ ಪೈಕಿ ಅರ್ಧಕ್ಕಿಂತ ಹೆಚ್ಚು ಜನರು ಚುನಾಯಿತರಾಗಿದ್ದಾರೆ. 4,936 ಜನರ ಪೈಕಿ ಅರ್ಧಕ್ಕಿಂತ ಮೇಲ್ಪಟ್ಟು ಜನರು ಚುನಾಯಿತರಾಗಿದ್ದಾರೆ. ಇನ್ನು ಎರಡು ಎರಡೂವರೆ ಸಾವಿರ ಜನರು ಚುನಾಯಿತರಾಗಿಲ್ಲ ಎಂದು ಇಟ್ಟುಕೊಳ್ಳುವುದಾದರೆ ಎರಡೂವರೆ ಸಾವಿರ ಜನರು ಮನೆಗೆ ಹೋಗುತ್ತಾರೆ ಎಂಬ ದೃಷ್ಟಿಯನ್ನು ಇಟ್ಟು, 15,000 ಜನ ಈಗಾಗಲೇ ಅನೇಕ ವರ್ಷಗಳಿಂದ ಚುನಾಯಿತರಾಗಿ ಕೆಲಸ ಮಾಡುತ್ತಾ ಇರುವವರನ್ನು ಮನೆಗೆ ಕಳುಹಿಸುವುದಾದರೆ ಆಗ ಯಾರ ಬಗ್ಗೆ ಹೆಚ್ಚು ಅನುಕಂಪ ತೋರಬೇಕು ? ಕರುಣೆ ಇರಬೇಕೆಂಬುದನ್ನೂ ಕೂಡ ನಾವು ಯೋಚನೆ ಮಾಡಬೇಕು. ಮತ್ತೊಂದು ವಿಚಾರ : ಲೋಕಲ್ ಕ್ಯಾಂಡಿಡೇಟ್ಸ್ ಈಗ ಕೆಲಸ ಮಾಡುತ್ತಾ ಇದ್ದವರೆಲ್ಲಾ ಮನೆಗೆ ಹೋಗುತ್ತಾರೆ ಅವರಿಗೆ ಬೇರೆ ಕೆಲಸ ಸಿಕ್ಕುವುದು ತೊಂದರೆ, ವಯಸ್ಸಿನ ಪರಿಮಿತಿ ಮುಗಿದು ಬಂದಿದೆ ಎಂಬ ವಿಚಾರ ಏನು ಹೇಳಿದ್ದಾರೆ ಅದರ ಬಗೆ ನಾನು ಮಾನ್ಯ ಸಭೆಯ ಗಮನಕ್ಕೆ ತರಬೇಕಾದ ವಿಚಾರ ಏನೆಂದರೆ, ಇದುವರೆಗೂ ಸರ್ಕಾರದಲ್ಲಿ ಅವರು ಎಷ್ಟು ವರ್ಷ ಕೆಲಸ ಮಾಡಿದ್ದಾರೆ ಆ ಕೆಲಸದ ಕಾಲ ಕೂಡ ಗಣನೆಗೆ ಬರುತ್ತದೆ. ಅವರು ಮತ್ತೆ ಪಬ್ಲಿಕ್ ಸರ್ವೀಸ್ ಕಮಿಷನ್ ಮುಂದೆ ಕೆಲಸಕ್ಕೆ ಅರ್ಜಿ ಹಾಕಿಕೊಳ್ಳಬಹುದು ಮತ್ತು ಆಗ

(ಶ್ರೀ ಎಚ್. ಆರ್. ಕೇಶವ ಮೂರ್ತಿ)

ಅವರಿಗೆ ಏಜ್ ಬಾರ್ ಆಗತಕ್ಕ ಸಂದರ್ಭ ಬರುವುದಿಲ್ಲ. ಏಕೆಂದರೆ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಸರ್ಕಾರದಲ್ಲಿ ಕೆಲಸಕ್ಕೆ ಸೇರಿದ ಕಾಲದಿಂದ ಎಷ್ಟು ದಿವಸ ಕೆಲಸ ಮಾಡಿರುತ್ತಾರೆಯೋ ಅಷ್ಟು ದಿವಸ, ತಿಂಗಳು ಅಥವಾ ವರ್ಷ ಕೂಡಿ ಬರುತ್ತದೆ. ಅವರ ಏಜ್ ಬಗ್ಗೆ ಇಂತಹ ಒಂದು ಕಾನೂನಿನಿಂದ ತೊಂದರೆ ಉಂಟಾಗಲಾರದು ಎನ್ನುವುದನ್ನೂ ಕೂಡ ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

11-30 A.M.

ಹೀಗೆ ಇಷ್ಟೊಂದು ಜನರನ್ನು ನಾವು ತೆಗೆದುಹಾಕಿ ಮತ್ತೆ 20-22 ಸಾವಿರ ಜನರನ್ನು ಹೊಸದಾಗಿ ಆಯ್ಕೆಮಾಡಲು ಹೊರಡುವುದಾದರೆ ಅದರಿಂದ ಆಡಳಿತದಲ್ಲಿ ತೊಂದರೆಯಾಗುತ್ತದೆ, ಸಲೀಸಾಗಿ ಆಡಳಿತ ನಡೆಯಲು ಸಾಧ್ಯವಿಲ್ಲ, ಇಷ್ಟು ಜನರಿಗೂ ಮನೆಗೆ ಕಳಿಸಿದರೆ ತೊಂದರೆಯಾಗುತ್ತದೆ ಎಂಬುದನ್ನು ಗಮನಿಸಿ ಈ ಒಂದು ಆರ್ಡಿನೆನ್ಸನ್ನು ಹೊರಡಿಸಲಾಯಿತು. ಕೇವಲ ಎರಡು-ಎರಡೂವರೆ ಸಾವಿರ ಜನರ ಹಿತ ಹೆಚ್ಚಾಗಿ ಗಮನಿಸಬೇಕಾಗಿತ್ತು ಎಂಬುದು ಕೆಲವರ ಅಭಿಪ್ರಾಯವಿದ್ದರೆ ಅದಕ್ಕೇನೂ ಮಾಡುವುದಕ್ಕಾಗುವುದಿಲ್ಲ. ಬಹು ಜನರ ಹಿತ ಮತ್ತು ಸರಕಾರದ ಆಡಳಿತ ಸುಲಲಿತವಾಗಿ ನಡೆಯ ಬೇಕು ಎಂಬುದನ್ನೆಲ್ಲಾ ಗಮನಿಸಿದಾಗ ಸರಕಾರ ತೆಗೆದುಕೊಂಡಿರುವ ಕ್ರಮ ಸರಿ, ಅವರು ಹೊರಡಿಸಿರುವ ಆರ್ಡಿನೆನ್ಸ್ ಸರಿ ಎಂದು ಬಹುಶಃ ಈ ಸಭೆ ಒಪ್ಪುವುದರಲ್ಲಿ ಯಾವ ಅಭ್ಯಂತರವೂ ಇಲ್ಲವೆಂದು ಭಾವಿಸುತ್ತೇನೆ.

ಇನ್ನೊಂದು ವಿಚಾರ ಶ್ರೀಮಾನ್ ಅಣ್ಣಾರಾಯರು ಹೇಳಿದರು. 309 ನೆ ಆರ್ಟಿಕಲ್ ಪ್ರಕಾರ ಈಗಾಗಲೆ ವಿಧಾನ ಸಭೆ ಕೆಲವು ಕಾನೂನುಗಳನ್ನು ಮಾಡಿ ಸರಕಾರದವರು ನೇಮಿಸಬೇಕಾದ ನಾನಾ ತರಗತಿಗಳ ಅಧಿಕಾರಗಳ ಬಗ್ಗೆ ರೂಲ್ಸ್, ರೆಗ್ಯುಲೇಷನ್ ಮಾಡಿದ್ದರೆ ಗೊಂದಲವೇ ಇರುತ್ತಿರಲಿಲ್ಲ ಎಂದು ಹೇಳಿದರು. ಅದು ಸ್ವಲ್ಪಮಟ್ಟಿಗೆ ಒಪ್ಪಬೇಕಾದ್ದೆ. ಏನೋ ಕಾರಣದಿಂದ ಅದರಲ್ಲೂ ನಮ್ಮ ಮೈಸೂರು ಸಂಸ್ಥಾನದಲ್ಲಿ ಅನೇಕ ಭಾಗಗಳು ಸೇರಿದ್ದರಿಂದ ನೂರಾರು ಕಾನೂನುಗಳಿಗೆ ಏಕರೂಪತೆ ಯನ್ನು ಕೊಡುವ ಒಂದು ದೊಡ್ಡ ಕೆಲಸ ಸರಕಾರದ ಮುಂದಿದ್ದು ಆರ್ಟಿಕಲ್ 309 ರ ಪ್ರಕಾರ ಈಗಾಗಲೆ ಇರಬೇಕಾಗಿದ್ದ ಕಾನೂನುಗಳು ಇರದೆ ನಿಧಾನವಾಗಿರುವುದು ನಿಜ. ಈಗ ಸರಕಾರಕ್ಕೆ ಬೇಕಾದ ಕಾನೂನುಗಳನ್ನು ಜಾಗ್ರತೆ ಇಲ್ಲಿ ತರಬೇಕೆಂಬ ಪ್ರವೃತಿ ಇದೆ. ಅವನ್ನು ತರುವುದಕ್ಕೆ ಸರಕಾರ ಪ್ರಯತ್ನ ಮಾಡುವುದು. ಈಗ ಗವರ್ನರ್‌ರವರು ಹೊರಡಿಸಿರುವ ಆರ್ಡಿನೆನ್ಸನ್ನು ಹೈಕೋರ್ಟ್ ಮುಂದೆ ಚಾಲೆಂಜ್ ಮಾಡಿ ಅದನ್ನು ರದ್ದುಪಡಿಸಿದ್ದಾರೆ. ಆ ಕಾರಣದಿಂದ ಈ ಬಿಲ್ಲನ್ನು ತರಬೇಕಾಯಿತು. ಇದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆರ್ಡಿನೆನ್ಸ್ ರದ್ದು ಮಾಡಿದಮೇಲೆ ಮತ್ತೇ ಈ ಬಿಲ್ಲು ತರುವುದು ಸರಿಯಲ್ಲ ಸರಕಾರದವರು ಮಾಡಿರುವ ಅನೇಕ ತಪ್ಪು ಗಳನ್ನು ಮುಚ್ಚುವುದಕ್ಕೆ ಈ ಬಿಲ್ಲನ್ನು ತಂದಿದ್ದಾರೆ ಎಂದು ಮುಂತಾಗಿ ಕೆಲವು ಟೀಕೆಗಳನ್ನು ಮಾಡಿ ದ್ದಾರೆ. ಸ್ವಾಮಿ, ಸರಕಾರದವರು ಕಾರ್ಯ ನಿರ್ವಹಣೆಮಾಡುವಾಗ ನಾವು ಮಾಡಿರುವುದನ್ನೆಲ್ಲಾ ಹೈಕೋರ್ಟು ಒಪ್ಪುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಹೈಕೋರ್ಟು ತಪ್ಪು ಎಂದು ಹೇಳುವು ದಕ್ಕೆ ಅವಕಾಶವಿಲ್ಲದಂತೆ ಕೂಡ ಮಾಡುವುದಕ್ಕಾಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಸರಕಾರ ಎಲ್ಲ ವಿಚಾರಗಳನ್ನೂ ಪರಿಶೀಲಿಸಿ ಒಂದು ಕಾನೂನನ್ನು ತಂದರೂ ಕೂಡ ಅದು ಇನ್ನೊಬ್ಬರ ದೃಷ್ಟಿಯಲ್ಲಿ ಅಥವ ಕೋರ್ಟಿನ ದೃಷ್ಟಿಯಲ್ಲಿ ತಪ್ಪಾಗಿರಬಹುದು. ಈ ಬಿಲ್ಲಿನಲ್ಲಿ ಸಮಿತಿಗಳ ರಚನೆಗೆ ಸಂಬಂಧಪಟ್ಟಂತೆ ರಾಜ್ಯಪಾಲರು ಮಾಡಿರುವ ರೂಲ್ಸುಗಳಿಗೆ ರೆಟ್ರಾಸ್ ಪೆಕ್ಟಿವ್ ಎಫೆಕ್ಟ್ ಕೊಡುವುದಕ್ಕಾಗುವುದಿಲ್ಲ ಎಂದು ಕೋರ್ಟು ಹೇಳಿದೆ. ಆದರೆ ಆರ್ಟಿಕಲ್ 309 ರ ಪ್ರಕಾರ ರಾಜ್ಯಪಾಲರು ರೆಟ್ರಾಸ್‌ಪೆಕ್ಟಿವ್ ಎಫೆಕ್ಟ್ ಇರುವಂತೆ ಒಂದು ಕಾನೂನು ಮಾಡುವುದಕ್ಕೆ ಅವರಿಗೆ ಅಧಿಕಾರವಿದೆ ಎಂಬುದು ಸರಕಾರದ ಅಭಿಪ್ರಾಯ. ಈ ವಿಚಾರದಲ್ಲಿ ಇನ್ನೂ ಅಂತ್ಯ ತೀರ್ಮಾನವಾಗಿಲ್ಲ. ನಮಗೆ ತಿಳಿದಹಾಗೆ ಬೇರೆ ಹೈಕೋರ್ಟುಗಳಲ್ಲಿ ರಾಜ್ಯಪಾಲರು ಈ ಕಾನೂ ನನ್ನು ಆರ್ಟಿಕಲ್ 309 ರ ಕೆಳಗೆ ಮಾಡುವುದಕ್ಕೆ ಅಧಿಕಾರವಿದೆ, ಅವರಿಗೆ ಈ ಕಾನೂನಿಗೆ ರೆಟ್ರಾಸ್ ಪೆಕ್ಟಿವ್ ಎಫೆಕ್ಟ್ ಕೊಡುವುದಕ್ಕೆ ಕೂಡ ಅಧಿಕಾರವಿದೆ ಎಂದು ತೀರ್ಮಾನವಾಗಿದೆ. ಇದೇ ಸಂದರ್ಭ ದಲ್ಲಿ ನಮ್ಮ ಸರಕಾರದವರು ಸುಪ್ರೀಂ ಕೋರ್ಟ್ ಮುಂದೆ ಈ ಬಗ್ಗೆ ಒಂದು ತೀರ್ಮಾನ ತೆಗೆದು ಕೊಳ್ಳುವುದಕ್ಕೆ ಅಪೀಲು ಕೂಡ ಮಾಡಿದ್ದಾರೆ. ಹೈಕೋರ್ಟು ಇದಕ್ಕೆ ರೆಟ್ರಾಸ್‌ಪೆಕ್ಟಿವ್ ಎಫೆಕ್ಟ್ ಕೊಡಲು ರಾಜ್ಯಪಾಲರಿಗೆ ಅಧಿಕಾರವಿಲ್ಲ ಎಂದು ಹೇಳಿದಾಗ ಅದನ್ನು ಪಾಲಿಸಬೇಕಾದ್ದು ಧರ್ಮ. ಅದು ಸರಿಯೇ ತಪ್ಪೆ ಎಂಬುದನ್ನು ಸುಪ್ರೀಂ ಕೋರ್ಟು ಮುಂದೆ ಹೋದಾಗ ಅದು ತೀರ್ಮಾನ ಕೊಟ್ಟಾಗ ನೋಡೋಣ. ಆದುವರೆಗೆ ಇದರಿಂದಾಗತಕ್ಕ ಪರಿಣಾಮವನ್ನು ಗಮನಿಸಿ ರಾಜ್ಯಪಾಲರು

ರಾಜ್ಯಾಂಗದ ಪ್ರಕಾರ ಇರುವ ಅಧಿಕಾರವನ್ನು ಚಲಾಯಿಸಿ ಆರ್ಡಿನೆನ್ಸ್ ಹೊರಡಿಸಿದಾಗ ಏಕೆ ಹೊರಡಿಸಿದಿರಿ ಎಂದು ಹೇಳಿದರೆ ಅದರ ಅರ್ಥವೇನೋ ಗೊತ್ತಾಗುವುದಿಲ್ಲ. ನಮ್ಮ ಸರಕಾರದ ಆಡಳಿತ ಯಂತ್ರ ನಡೆಯುವುದಕ್ಕೆ ಧಕ್ಕೆಯುಂಟಾಗುತ್ತದೆ ಎಂದು ಕಂಡುಬಂದಾಗ ಅನೇಕ ವಿಚಾರಗಳಲ್ಲಿ ಹೈಕೋರ್ಟು ತೀರ್ಮಾನವಿದ್ದರೂ ಕಾನೂನಿನಲ್ಲಿರುವ ರಕ್ಷಣೆಯನ್ನು ಪಡೆಯುವುದೇನೂ ತಪ್ಪಲ್ಲ. ಆ ದೃಷ್ಟಿಯಿಂದ ಈ ಆರ್ಡಿನೆನ್ಸ್ ತಂದಿರುವುದು.

ಗೋಪಾಲಗೌಡರು ತಮ್ಮ ಠರಾವಿನಲ್ಲಿ ಆರ್ಡಿನೆನ್ಸ್ ವ್ಯಾಲಿಡೇಟ್ ಮಾಡುವುದಕ್ಕೆ ಈ ಬಿಲ್ಲನ್ನು ತಂದಿದ್ದಾರೆ ಎಂದು ಹೇಳಿದ ಹಾಗಿದೆ. ಆದರೆ ಅದು ಹಾಗಿಲ್ಲ. ಈಗ ಆರ್ಡಿನೆನ್ಸ್ ಸರಿಯೇ, ತಪ್ಪೆ ಎಂದು ಸಹ ತೀರ್ಮಾನವಾಗದಿರುವಾಗ, ಹೈಕೋರ್ಟಿನ ಮುಂದೆ ಸ್ಟೇ ಆಗಿ ಸರಿಯಲ್ಲವೆಂದು ತೀರ್ಮಾನವಾಗಿಲ್ಲದಿರುವಾಗ ಇದರ ಬಗ್ಗೆ ಸರಿಯೇ, ತಪ್ಪೆ ಎಂದು ಮಾತನಾಡುವುದು ಉಚಿತವಾಗಿ ಕಾಣುವುದಿಲ್ಲ. ಸಮಿತಿಗಳು ಚುನಾಯಿಸಿರುವ ಅಧಿಕಾರಿಗಳನ್ನು ಭದ್ರಪಡಿಸುವ ದೃಷ್ಟಿಯಿಂದ ಈ ಬಿಲ್ಲನ್ನು ತಂದಿದೆ. ಈ ಎಲ್ಲಾ ಕಾರಣಗಳನ್ನು ಕೊಟ್ಟ ಮೇಲೆ ಬಹುಶಃ ಈ ಮಾನ್ಯ ಸಭೆ ಗೋಪಾಲಗೌಡರು ತಂದಿರುವ ನಿರ್ಣಯವನ್ನು ಒಪ್ಪದು ಸರಿಯಲ್ಲ, ಅವರು ಅಧಿಕಾರಿಗಳ ಬಗ್ಗೆ ಇಟ್ಟುಕೊಂಡಿರುವ ದಯಾದೃಷ್ಟಿಯಿಂದಲೇ ಠರಾವನ್ನು ತಂದಿದ್ದರೂ ಅದನ್ನು ವಾಪಸ್ಸು ತೆಗೆದುಕೊಳ್ಳುವುದು ಒಳ್ಳೆಯದು ಮತ್ತು ಸರಕಾರದವರು ಮಂಡಿಸಿರುವ ಮಸೂದೆಗೆ ಮಾನ್ಯ ಸಭೆ ಬೆಂಬಲ ಕೊಡುವುದು ಒಳ್ಳೆಯದು ಎಂದು ಮನವಿಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಅಧ್ಯಕ್ಷರೇ, ಈ ನಿರ್ಣಯದ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸಿದ ಎಲ್ಲರೂ ಸಾಮಾನ್ಯವಾಗಿ ನಿರ್ಣಯವನ್ನು ಸಮರ್ಥಿಸಿದ್ದಾರೆ. ಮುಖ್ಯವಾಗಿ ಅನುಕಂಪದ ಪ್ರಶ್ನೆಗಿಂತ ಹೆಚ್ಚು ಕ್ರಮಬದ್ಧತೆಯ ಪ್ರಶ್ನೆ ಇಲ್ಲಿ ಬಹಳ ಮುಖ್ಯ. ಸರ್ಕಾರ ತನ್ನ ಸೇವೆಗೆ ಜನರನ್ನು ನೇಮಿಸಿಕೊಳ್ಳುವಾಗ ಅನುಸರಿಸಿಕೊಂಡು ಬರುತ್ತಿರತಕ್ಕ ರೀತಿ ನೀತಿಗಳು ಕ್ರಮಬದ್ಧವಾಗಿಲ್ಲ, ಅವರು ಕ್ರಮಬದ್ಧವಾಗಿ ನಡೆದುಕೊಂಡಿಲ್ಲ, 309 ನೆ ವಿಧಿಯನ್ನು ಜಾರಿಗೆ ತರುವ ಬಗ್ಗೆ ರಾಜ್ಯ ಸರ್ಕಾರ ಏನೊಂದು ಶ್ರಮ ವಹಿಸಿಲ್ಲ, ಕ್ರಮ ತೆಗೆದುಕೊಂಡಿಲ್ಲ ಎನ್ನುವುದು ಬಹಳ ಮುಖ್ಯ. 15 ಸಾವಿರ ದೊಡ್ಡದೋ, ಎರಡು ಸಾವಿರ ದೊಡ್ಡದೋ ಎನ್ನುವುದು ಮುಖ್ಯವಲ್ಲ. ಒಬ್ಬರನ್ನು ಕೆಲಸದಿಂದ ತೆಗೆದರೂ ಮಹಾಪರಾಧವಾಗುತ್ತದೆ. 15 ಸಾವಿರ ಜನರಿಗೆ ಕೆಲಸ ಕೊಡುತ್ತೇವೆಂದು ಹೇಳಿ ನ್ಯಾಯವಾದ ರೀತಿಯಲ್ಲಿ ಹತ್ತು ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದವನನ್ನು ತೆಗೆದರೂ ದೊಡ್ಡ ಅನ್ಯಾಯವೇ ಆಗುತ್ತದೆ. ನಿಮಗೆಲ್ಲ ಜೂರಿಸ್‌ಪ್ರುಡೆನ್ಸ್ ಗೊತ್ತು. ನಾನು ಹೇಳಿ ಕೊಡಬೇಕಾದುದಿಲ್ಲ. ಸಂಖ್ಯೆಯ ಮೇಲೆ ಅದು ನಿರ್ಧಾರವಾಗುವುದಿಲ್ಲ.

ಸ್ವಾಮಿ, ಇದುವರೆಗೂ 22,413 ಸ್ಥಳಗಳು ಖಾಲಿ ಬಿದ್ದಿದ್ದು ಅವಕ್ಕೆ ಸುಮಾರು 22,027 ಜನರನ್ನು ಈ ಕಮಿಟಿಗಳು ಇದುವರೆಗೂ ಆಯ್ಕೆ ಮಾಡಿವೆ. ಅದರಲ್ಲಿ ಸುಮಾರು 15 ಸಾವಿರ ಜನರನ್ನು ಈಗಾಗಲೇ ನೇಮಕ ಮಾಡಿಕೊಳ್ಳಲಾಗಿದೆ. ಈ 15 ಸಾವಿರದಲ್ಲಿ ಸುಮಾರು ಎರಡು ಸಾವಿರಗಳಿಂತ ಹೆಚ್ಚು ಜನ ಸ್ಥಳೀಯವಾಗಿ ನೇಮಿಸಿಕೊಂಡಂಥ ಅಭ್ಯರ್ಥಿಗಳಾಗಿ ಕೆಲಸ ಮಾಡುತ್ತಿರುವವರು ಎಂದು ಮಾನ್ಯ ಸಚಿವರು ಸಭೆಗೆ ತಿಳಿಸಿದ್ದಾರೆ. ನನ್ನ ಉದ್ದೇಶ ಈ 15 ಸಾವಿರ ಜನರಿಗೆ ಅಥವಾ ಈ ಸಮಿತಿ ಆಯ್ಕೆ ಮಾಡಿದಂಥ 22 ಸಾವಿರ ಜನರಿಗೆ ಅನ್ಯಾಯ ಮಾಡಬೇಕು, ಕೆಲಸ ಸಿಕ್ಕಬಾರದು, ಅವರ ಬಗ್ಗೆ ನಮಗೆ ಅನುಕಂಪವಿಲ್ಲ ಎನ್ನುವ ಮಾತಲ್ಲ. ಅರ್ಹರಾದವರಿಗೆಲ್ಲ ಕೆಲಸ ದೊರೆಯಬೇಕು, ವಿಳಂಬವಾಗುವುದು ತಪ್ಪು. ಸರ್ಕಾರಿ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದರಲ್ಲಿ ಬಹಳ ಅಸಡ್ಡೆಯಿಂದ ಕೆಲಸ ನಡೆದಿದೆ. ಅದರಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ ಈ ಅಪಾದನೆಗೆ ಹೊರತಾಗಿಲ್ಲ. ಅವರು ತಡ ಮಾಡುತ್ತಾರೆಂದು ಸರ್ಕಾರದವರು ತೆಗೆದುಕೊಂಡರು. ಇವರು ಅವರ ಹತ್ತರಷ್ಟು ತಡ ಮಾಡಿದರು. ತಡ ಮಾಡುವುದರಲ್ಲಿ ಇವರ ಅನುಕೂಲಗಳನ್ನು ನೋಡಿದರೇ ಹೊರತಾಗಿ ಮತ್ತೇನೂ ಮಾಡಲಿಲ್ಲ. ಲೋಕಲ್ ಕಾಂಡಿಡೇಟ್ಸ್ ಎಂದು ಸ್ಥಳೀಯವಾಗಿ ಕೆಲಸಕ್ಕೆ ನೇಮಕ ಮಾಡಿಕೊಳ್ಳುತ್ತಾರೆ. ಇಂಥ ಲೋಕಲ್ ಕ್ಯಾಂಡಿಡೇಟ್ಸ್ ಭವಿಷ್ಯ ಮೂರು ತಿಂಗಳಲ್ಲಿ ನಿರ್ಣಯವಾಗಬೇಕು. ತಕ್ಷಣ ಕೆಲಸಕ್ಕೆ ನೇಮಕ ಮಾಡಿಕೊಳ್ಳುತ್ತೇವೆಂದು ಲೋಕಲ್ ಕ್ಯಾಂಡಿಡೇಟ್‌ಗಳನ್ನು ತೆಗೆದುಕೊಳ್ಳುವ ಪರಿಪಾಠ ನಮ್ಮಲ್ಲಿ ಬೆಳೆದು ಬಂದಿದೆ. ಇವರ ಜಾಗಕ್ಕೆ ಬೇರೆಯವರನ್ನು ರಿಕ್ರೂಟ್ ಮಾಡಿ ಲೋಕಲ್ ಕ್ಯಾಂಡಿಡೇಟ್ಸ್ ಎಂದು ಏನು ನೇಮಕ ಮಾಡಿರುತ್ತಾರೆ ಅವರನ್ನು ವಾಪಸ್ ಕಳಿಸುತ್ತೇವೆಂದು ಹೇಳುತ್ತಾರೆ. ಈ ರೀತಿ ನಡೆದಿದೆ. ಅವ್ಯವಹಾರಗಳು ಎಂದು ನಾವು ಏನು ಕರೆಯುತ್ತೇವೆ ......

ಅಧ್ಯಕ್ಷರು.—ಈ ವಿಷಯಕ್ಕಾಗಿ ಗೊತ್ತು ಮಾಡಿದ್ದ ಎರಡು ಗಂಟೆ ಕಾಲ ಮುಗಿಯಿತು. ಟೈಂ ಎಕ್ಸ್‌ಟೆಂಡ್ ಮಾಡಿಲ್ಲ. ಇನ್ನೂ ಒಂದು ಬಿಲ್ ಇರುವುದು ಮುಗಿಯಬೇಕಾಗಿದೆ. ಇದಕ್ಕೆ

(ಅಧ್ಯಕ್ಷರು)

ಇನ್ನೂ ಹತ್ತು ನಿಮಿಷ ಕಾಲವನ್ನು ಹೆಚ್ಚಿಸುತ್ತೇನೆ. ಮಾನ್ಯ ಸದಸ್ಯರು ಇನ್ನು ಐದು ನಿಮಿಷದಲ್ಲಿ ಭಾಷಣವನ್ನು ಮುಗಿಸಬೇಕು.

ಶ್ರೀ ಎಸ್. ಗೋಪಾಲಗೌಡ.—ರೆಕ್ರೂಟ್‌ಮೆಂಟ್ ವಿಷಯದಲ್ಲಿ ಈಗಾಗಲೇ ಅನೇಕರು ಮಾತ ನಾಡಿದ್ದಾರೆ. ಅತೃಪ್ತಿ, ಅಸಮಾಧಾನ ಇವು ಎಲ್ಲ ಇಲಾಖೆಯಲ್ಲಿ, ಎಲ್ಲ ಮಟ್ಟದ ನೌಕರ ವರ್ಗದಲ್ಲಿ ತುಂಬಿ ತುಳುಕಾಡುತ್ತಿವೆ. ಅದು ಎಷ್ಟು ಹೇಳಿದರೂ ಸಾಧ್ಯವಿಲ್ಲ. ಎಂಟು ವರ್ಷಗಳಿಂದ, ಈ ರಾಜ್ಯ ಒಂದಾದ ಮೇಲೆ ಸೀನಿಯಾರಿಟಿ ಪಟ್ಟಿಗಳನ್ನು ತಯಾರು ಮಾಡದೆ ಅದರಿಂದ ಆಗಿರತಕ್ಕ ವಿಳಂಬ ಹಾಗೂ ಗೆಜೆಟೆಡ್ ಹುದ್ದೆಗಳಿಗೆ ಕೂಡ ರಿಕ್ರೂಟ್ ಮಾಡಿದವರನ್ನು, ಅಮಲ್ದಾರರಾಗಿ, ತಹಸೀಲ್ದಾರರಾಗಿ ಕೆಲಸ ಮಾಡಿದವರು ಮನೆಗೆ ಹೋಗಿರುವುದು, ಮುನಸೀಫರಾಗಿ ಕೆಲಸ ಮಾಡಿ ರುವವರು ಮನೆಗೆ ಹೋಗಿರುವುದು, ಇಂಥ ಸಹಸ್ರಾರು ಉದಾಹರಣೆಗಳನ್ನು ನಮ್ಮ ರಾಜ್ಯದಲ್ಲಿ ನೌಕರರ ನೇಮಕದ ಬಗ್ಗೆ ಕೊಡಬಹುದು. ಇನ್ನು ಪ್ರಮೋಷನ್ ವಿಷಯ ತೆಗೆದುಕೊಂಡರೆ ಖುಷಿ ಪೋಸ್ಟ್ಸ್ ಕೊಡುವುದು, ಪೊಲಿಟಿಕಲ್ ಪೋಸ್ಟ್ಸ್ ಕೊಡುವುದು ಎಂದು ಯಾರೋ ಹೇಳಿದರು. ಖುಷಿ ಪೋಸ್ಟ್ಸ್ ಕೊಡುವುದಕ್ಕೆ ಒಂದೊಂದು ಪೋಸ್ಟ್ ಸೃಷ್ಟಿ ಮಾಡಿದಾಗಲದ 20 ವರ್ಷಗಳಿಂದ ದುಡಿದಂಥ ಅನೇಕ ನಿಸ್ಪೃಹ ಅಧಿಕಾರಿಗಳು ಯಾರಿದ್ದಾರೆ ಅವರಿಗೆ ಜುಗುಪ್ಸೆ ಬರುವ ರೀತಿಯಲ್ಲಿ ವರ್ತಿಸಿ ಸೆಲೆಕ್ಷನ್ ಪೋಸ್ಟ್ಸ್ ಮತ್ತು ಪ್ರಮೋಷನ್ ಪೋಸ್ಟ್ಸ್ ಇವನ್ನು ಕೊಟ್ಟಿದ್ದೀರಿ. ನಾನು ಈ ಮಾತನ್ನು ಇಲ್ಲಿ ಹೇಳುತ್ತಿರಲಿಲ್ಲ. ನೌಕರರ ಬಗ್ಗೆ ಅನುಕಂಪದ ಪ್ರಶ್ನೆ ಬಂದುದರಿಂದ ಹೇಳಬೇಕಾ ಯಿತು. ನಿಜ, ರಿಕ್ರೂಟ್‌ಮೆಂಟ್ ಮಾಡುವಾಗ ಕೆಲವು ತಪ್ಪುಗಳಾದುವು, ಅವನ್ನು ತಿದ್ದಿಕೊಳ್ಳು ವುದಕ್ಕೆ ಈ ವಿಧೇಯಕವನ್ನು ಸರ್ಕಾರದವರು ತಂದಿದ್ದಾರೆ. ಈಗಾಗಲೇ ಕಮಿಟಿಗಳ ಮೂಲಕ ಚುನಾಯಿತರಾಗಿ ನೌಕರಿಯಲ್ಲಿರುವವರಿಗೆ ನ್ಯಾಯ ದೊರಕಿಸಬೇಕು, ಅವರ ನೇಮಕಗಳನ್ನು ಕ್ರಮಬದ್ಧಗೊಳಿಸಬೇಕು. ಹಿಂದೆ ಯಾವ ರೀತಿ ನೌಕರರ ನೇಮಕವನ್ನು ಕ್ರಮಬದ್ಧಗೊಳಿಸಿದರೋ ಅದೇ ರೀತಿ ಈ ನೇಮಕಾತಿಗಳನ್ನೂ ಕೂಡ ಕ್ರಮಬದ್ಧಗೊಳಿಸುವ ಅವಶ್ಯಕತೆ ಬಹಳ ಇದೆ. ವಿಧಾನ ಸೌಧದಲ್ಲಿ ಕೆಲಸ ಮಾಡುವ 800 ಜನ ರಿಟ್ ಹಾಕಿದ್ದರು. ಅದರಲ್ಲಿ ಮೂರು, ನಾಲ್ಕು, ಐದು ಇನ್‌ಕ್ರಿಮೆಂಟುಗಳನ್ನು ಪಡೆದಿರುವವರೂ ಇದ್ದಾರೆ; ಸರ್ಕಾರದಲ್ಲಿ ಸೇವೆ ಮಾಡಿರುವವರೂ ಇದ್ದಾರೆ. ಮಾನ್ಯ ಸಚಿವರು ಭರವಸೆಯನ್ನು ಕೊಟ್ಟರು, ಅವರಿಗೆ ಏನೋ ಮಾಡುತ್ತೇವೆಂದು. ಯಾವ ರೀತಿ ಅವರ ಹುದ್ದೆಗಳನ್ನು......

ಶ್ರೀ ಡಿ. ದೇವರಾಜ ಅರಸ್.—ಅದನ್ನು ಹೇಗೆ ಹೇಳುವುದಕ್ಕೆ ಬರುತ್ತದೆ? ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸ ಮಾಡುವವರು ಚುನಾಯಿತರಾಗದೆ ಇದ್ದರೆ ಅವರು ಮುಂದೆ ಕೆಲಸ ಗಳಿಗೆ ಅರ್ಜಿಯನ್ನು ಸಲ್ಲಿಸಿದಾಗ ಅವರ ವಯೋಮಿತಿಯ ಸಂಬಂಧದಲ್ಲಿ ಅವರ ಹಿಂದಿನ ಸರ್ವಿಸನ್ನು ಗಣನೆಗೆ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ಏಜ್ ಬಾರ್ ಪ್ರಶ್ನೆ ಬಂದಾಗ ಅವರು ಹಿಂದೆ ಮಾಡಿರುವ ಸರ್ವಿಸನ್ನು ಗಣನೆಗೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಅದೊಂದು ಭರವಸೆಯನ್ನು ಇಟ್ಟು ಕೊಳ್ಳಬಹುದು. ಆದರೆ ಈಗಾಗಲೇ ಎಷ್ಟೋ ಪತ್ರಗಳು ನನಗೆ ಬರುತ್ತಿವೆ; ಅಂಥ ನೌಕರರು ಬರೆಯುತ್ತಾರೆ. ಲೋಕಲ್ ಕ್ಯಾಂಡಿಡೇಟ್‌ಗಳಾಗಿದ್ದವರನ್ನು ರಿಕ್ರೂಟ್‌ಮೆಂಟ್ ಕಮಿಟಿಯಿಂದ ಆರಿಸಿ ಬಂದ ಅಭ್ಯರ್ಥಿಗಳು ಕೆಲಸಕ್ಕೆ ಬಂದ ಮೇಲೆ ಹೊರಗೆ ಹಾಕುತ್ತಿದ್ದಾರೆ, ಪುನಃ ಕೆಲಸಕ್ಕೆ ಅವರು ಊರೂರು ಅಲೆಯಬೇಕು. ಒಂದು ವೇಳೆ ಕೆಲಸ ಸಿಕ್ಕಬಹುದು, ಒಂದು ವೇಳೆ ಕೆಲಸ ಸಿಕ್ಕದೆ ಹೋಗಬಹುದು. ಕೆಲವಾರು ವರ್ಷಗಳು ಸರ್ಕಾರಿ ನೌಕರಿಯಲ್ಲಿ ಇದ್ದವರನ್ನು ಹೊರಗೆ ಹಾಕಿದರೆ ಈ ದುರ್ದಿವಸಗಳಲ್ಲಿ, ಕಷ್ಟ ದಿವಸಗಳಲ್ಲಿ ಬಹಳ ಅನ್ಯಾಯವಾಗುತ್ತದೆ. ಖಾಸಗಿ ಕಾರ್ಖಾನೆಯಲ್ಲಿ ಆಗಲೀ, ಸಂಸ್ಥೆಗಳಲ್ಲಾಗಲೀ, ಉದ್ಯಮಗಳನ್ನಾಗಲೀ ಒಬ್ಬ ಕೆಲಸಗಾರರನ್ನು ನಿವೃತ್ತಿ ಮಾಡಿದಾಗ ನಾವು ಪ್ರತಿಭಟನೆ ಮಾಡುತ್ತೇವೆ; ಅವನನ್ನು ರೀ-ಇನ್‌ಸ್ಟೇಟ್ ಮಾಡಬೇಕು, ಅವನಿಗೆ ನ್ಯಾಯದೊರಕಿಸಿಕೊಡಬೇಕು ಎಂದು ಹೇಳುತ್ತೇವೆ. ಬಹಳ ಜನರನ್ನು ನೌಕರಿಯಲ್ಲಿಟ್ಟು ಕೊಂಡಿರುವ ದೊಡ್ಡ ಮಾಲೀಕನಾಗಿರತಕ್ಕ ಸರ್ಕಾರ ತನ್ನ ನೌಕರರನ್ನು ನೇಮಕ ಮಾಡಿಕೊಳ್ಳು ವಾಗ, ಅವರಿಗೆ ಪ್ರಮೋಷನ್ ಕೊಡುವಾಗ, ಅವರ ನೇಮಕಾತಿಯನ್ನು ಕ್ರಮಬದ್ಧಪಡಿಸುವಾಗ ಬಹಳ ಜಾಗ್ರತೆಯಿಂದ ಇರಬೇಕು, ಯಾರಿಗೂ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ಅದನ್ನು ಹೇಳುವುದಕ್ಕೆ ನಾನು ಈ ನಿರ್ಣಯವನ್ನು ಇಂದು ತಂದಿದ್ದೇನೆ. ಈ ನಿರ್ಣಯವನ್ನು ಸಭೆ ಅಂಗೀ ಕಾರ ಮಾಡಬೇಕು. ಏಕೆಂದರೆ ಕೋರ್ಟಿನಲ್ಲಿ ಆರ್ಡಿನೆನ್ಸನ್ನು ಸ್ಟೇ ಮಾಡಿರುವುದರಿಂದ ಅದೇ ವಿಷ ಯದ ಬಗ್ಗೆ ನಾವು ಕಾನೂನು ಮಾಡಿದರೆ ಅದನ್ನು ಕೂಡ ಸ್ಟೇ ಮಾಡುವುದಕ್ಕೆ ಬರುತ್ತದೆಯೋ

ಹೇಗೋ ಗೊತ್ತಿಲ್ಲ. ಅದಕ್ಕೆ ಮಾನ್ಯ ಅಧ್ಯಕ್ಷರು ನಮಗೆ ನಿರ್ದೇಶನ ನೀಡಬೇಕು ಮತ್ತು ಲಾ ಡಿಪಾರ್ಟ್‌ಮೆಂಟಿನವರು ನಮಗೆ ಹೇಳಬೇಕು. ನಮಗೆ ಕಾನೂನು ಮಾಡುವುದಕ್ಕೆ ಅಧಿಕಾರವಿದೆ, ಅದರಲ್ಲಿ ಏನೂ ಸಂಶಯವಿಲ್ಲ. ಆದರೆ ಯಾರ ವಿಷಯವನ್ನು ಹೈಕೋರ್ಟ್ ತಡೆ ಹಿಡಿಯಿತೋ ಆ ವಿಷಯದಮೇಲೆ ಕಾನೂನು ಮಾಡಿದ ಮಾತ್ರಕ್ಕೇ ಸಂಬಂಧಪಟ್ಟ ವಿಷಯಗಳು ನಮ್ಮ ಮನಸ್ಸಿನಂತೆ ನಡೆಸಿಕೊಂಡು ಹೋಗುವುದಕ್ಕೆ ಅವಕಾಶವಾಗುತ್ತದೆ ಎನ್ನುವ ಪ್ರಶ್ನೆಯನ್ನು ಸರ್ಕಾರ ಪುನರ್ವಿಮರ್ಶೆ ಮಾಡಬೇಕು. ಈ ಕಾರಣದಿಂದ ಈ ಆರ್ಡಿನೆನ್ಸನ್ನು ಈಗ ಒಪ್ಪಬಾರದು, ಅಂಗೀಕರಿಸಬಾರದು. ಈಗ ಇದರ ಅಂಗೀಕಾರವನ್ನು ನಾವು ತಡೆ ಹಿಡಿಯುವುದರಿಂದ ಪುನಃ ಸರ್ಕಾರದವರು ವಿಚಾರಮಾಡಿ ಒಂದು ಸಮಗ್ರವಾದ ಎಲ್ಲರಿಗೂ ನ್ಯಾಯ ದೊರಕಿಸತಕ್ಕ ಒಂದು ಮಾರ್ಗವನ್ನು ಸರ್ಕಾರ ಹುಡುಕುವುದಕ್ಕೆ ಸಹಾಯ ಮಾಡಬೇಕೆಂದು ಹೇಳಿ ಈ ನನ್ನ ನಿರ್ಣಯವನ್ನು ಈ ಮಾನ್ಯ ಸಭಾಸದಸ್ಯರೆಲ್ಲರ ಬೆಂಬಲಕ್ಕಾಗಿ ಈ ಸಭೆಯ ಮುಂದಿಡುತ್ತೇನೆ.

Mr. SPEAKER.—I will put the Resolution to the House. The question is:

"That this House disapproves the Mysore State Civil Services Class III Posts Recruitment (Validation) Ordinance, 1965".

The resolution was negatived.

I will put the consideration of the Bill. The question is:

"That the Mysore State Civil Services Class III Posts Recruitment (Validation) Bill, 1965, be taken into consideration".

The motion was adopted.

There are no amendments. The question is:

"That clauses 2 to 5, both inclusive, stand part of the Bill."

The motion was adopted.

Clauses 2 to 5, both inclusive, were added to the Bill.

The question is:

"That clause 1, the Title and the Preamble stand part of the Bill".

The motion was adopted.

Clause 1, the Title and the Preamble were added to the Bill.

Motion to pass

Sri D. DEVARAJ URS.—Sir, I beg to move;

"That the Mysore State Civil Services Class III Posts Recruitment (Validation) Bill, 1965, be passed".

Mr. SPEAKER.—The question is:

"That the Mysore State Civil Services Class III Posts Recruitment (Validation) Bill, 1965, be passed".

The motion was adopted.

———